# ಕನ್ನಡ ಪೋಸ್ಟ್

ಸಂಪಾದಕ : ಮಂಜು ಬನವಾಸೆ | KANNADA POST | ಇದು ಸುದ್ದಿ ವಿಲಾಸ | ಕನ್ನಡ ದಿನಪತ್ರಿಕೆ

ಹಾಸನ | E-mail : kannadapostnews@gmail.com | / ಕನ್ನಡ post | Price: ₹1

Vol.No.02 | Issue. 27 | Pages. 2 | Date: 24-12-2025, WEDNESDAY RNI NO: KARKAN/2024/89601 Kannada Daily

ಸಂಪುಟ : 02 – ಸಂಚಿಕೆ : 27 – ಪುಟಗಳು : 2 24-12-2025 ಬುಧವಾರ Ph: 8762954248 ದರ : ₹1


# ಸಕಲೇಶಪುರದಲ್ಲಿ ಬೆಳ್ಳಂ ಬೆಳಿಗ್ಗೆ ಜಿಲ್ಲಾಧಿಕಾರಿ ಪ್ರದಕ್ಷಿಣೆ

## ಒತ್ತುವರಿ ತೆರವಿಗೆ ಸೂಚನೆ | ಸ್ವಚ್ಛತೆ ಕಾಪಾಡಿಕೊಳ್ಳಲು ಸಲಹೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಸಕಲೇಶಪುರ: ಜಿಲ್ಲಾಧಿಕಾರಿ ಕೆ.ಎಸ್. ಲತಾಕುಮಾರಿ ಅವರು ಮಂಗಳವಾರ ಬೆಳ್ಳಂ ಬೆಳಿಗ್ಗೆ ಪಟ್ಟಣ ಪ್ರದಕ್ಷಿಣೆ ಮೂಲಕ ಸಾರ್ವಜನಿಕ ಸಮಸ್ಯೆಗಳಿಗೆ ಸ್ಪಂದಿಸಿದರು.

ಶಾಪ್ ಸಿದ್ದೇಗೌಡ ಶಾಲೆಯಿಂದ ಹಳೆ ಹಾಗೂ ಹೊಸ ಬಸ್ ನಿಲ್ದಾಣದ ವರೆಗೆ ಕಾಲ್ನಡಿಗೆಯಲ್ಲಿ ಬಂದ ಅವರು ರಸ್ತೆ, ಫುಟ್‌ಪಾತ್, ಪಾರ್ಕಿಂಗ್ ಹಾಗೂ ಸ್ವಚ್ಛತೆ ಸಮಸ್ಯೆಗಳ ಕುರಿತು ಅಧಿಕಾರಿಗಳು ಮತ್ತು ಸಾರ್ವಜನಿಕರಿಂದ ಮಾಹಿತಿ ಪಡೆದರು.

ರಾಷ್ಟ್ರೀಯ ಹೆದ್ದಾರಿ ಮರು ಡಾಂಬರೀಕರಣದ ಬಳಿಕ ರಸ್ತೆ ಎರಡೂ ಬದಿಗಳಲ್ಲಿ ಗ್ರಾವಿಲ್ ಹಾಕದೆ ಇರುವುದನ್ನು ಗಮನಿಸಿ, ಕೂಡಲೇ ಅದನ್ನು ತುಂಬಿಸುವಂತೆ ಅಧಿಕಾರಿಗಳಿಗೆ ಸೂಚಿಸಿದರು. ಹಳೆ ಬಸ್ ನಿಲ್ದಾಣ ಸಮೀಪ ಫುಟ್‌ಪಾತ್ ಅತಿಕ್ರಮಿಸಿ ಅಂಗಡಿ ಮುಂಗಟ್ಟು ಹಾಕಿರುವ ಬೀದಿ ವ್ಯಾಪಾರಿಗಳನ್ನು ತೆರವುಗೊಳಿಸುವಂತೆ ಪುರಸಭೆಗೆ ಆದೇಶಿಸಿದರು. ಅಲ್ಲದೆ ನಿರ್ಮಾಣ ಹಂತದಲ್ಲಿರುವ ವಾಣಿಜ್ಯ ಕಟ್ಟಡದ ಮುಂಭಾಗದಲ್ಲಿರುವ ಅನಧಿಕೃತ ಅಂಗಡಿ ಹಾಗೂ ಪ್ಲಾಸ್ಟಿಕ್ ತೆರವುಗೊಳಿಸಿ, ಕಟ್ಟಡವನ್ನು ಟೆಂಡರ್ ಮೂಲಕ ನೀಡುವ ಮೂಲಕ ಪುರಸಭೆಗೆ ಆದಾಯ ಮೂಲವನ್ನಾಗಿ ಮಾಡಬೇಕು ಹಾಗೂ ಸಾರ್ವಜನಿಕ ಶೌಚಾಲಯ ನಿರ್ಮಿಸಬೇಕೆಂದು ಸೂಚಿಸಿದರು.

### ಅಕ್ರಮ ಅಂಗಡಿ ತೆರವುಗೊಳಿಸಿ

ಹಳೆ ತಾಲೂಕು ಪಂಚಾಯಿತಿ ಕಚೇರಿ ಸ್ಥಳಕ್ಕೆ ಭೇಟಿ ನೀಡಿದ ಅವರು, ಅಕ್ರಮ ಅಂಗಡಿಗಳನ್ನು ತೆರವುಗೊಳಿಸಿ ಗೇಟ್ ನಿರ್ಮಿಸಿ ವಾಹನ ನಿಲುಗಡೆ ವ್ಯವಸ್ಥೆ ಕಲ್ಪಿಸಬೇಕು ಎಂದು ಸೂಚಿಸಿದರು. ಖಾಸಗಿ ವ್ಯಕ್ತಿಗಳು ಹಳೆ ತಾಲೂಕು ಕಚೇರಿ ಆವರಣವನ್ನು ದುರುಪಯೋಗಪಡಿಸಿಕೊಂಡು ವಾಣಿಜ್ಯ ಚಟುವಟಿಕೆ ನಡೆಸುತ್ತಿರುವುದು ಕಂಡುಬಂದಿದ್ದು, ಯಾವುದೇ ಕಾರಣಕ್ಕೂ ಈ ಸ್ಥಳದಲ್ಲಿ ಖಾಸಗಿ ವಾಣಿಜ್ಯ ಚಟುವಟಿಕೆಗಳಿಗೆ ಅವಕಾಶ ನೀಡಬಾರದು ಎಂದು ತಹಶೀಲ್ದಾರ್‌ಗೆ



ಕಟ್ಟುನಿಟ್ಟಿನ ಸೂಚನೆ ನೀಡಿದರು. ಈ ಸ್ಥಳವನ್ನು ಸಮತಟ್ಟು ಮಾಡಿ, ಮರಗಳನ್ನು ಕಡಿಯಬಾರದೆಂದು ಆದೇಶಿಸಿದರು. ನಂತರ ಹೊಸ ಬಸ್ ನಿಲ್ದಾಣಕ್ಕೆ ಭೇಟಿ ನೀಡಿದ ಜಿಲ್ಲಾಧಿಕಾರಿ, ಕೆಎಸ್‌ಆರ್‌ಟಿಸಿ ಸಿಬ್ಬಂದಿಯೊಂದಿಗೆ ಚರ್ಚಿಸಿ ಬಸ್ ನಿಲ್ದಾಣವನ್ನು ಸ್ವಚ್ಛ ಹಾಗೂ ಸುಸಜ್ಜಿತವಾಗಿ ನಿರ್ವಹಿಸುವಂತೆ ಸೂಚಿಸಿದರು. ಶೌಚಾಲಯಗಳಿಂದ ಹೊರಬರುವ ತ್ಯಾಜ್ಯ ನೀರನ್ನು ಕೆರೆಗೆ ಹರಿಬಿಡಬಾರದು ಎಂದು ಎಚ್ಚರಿಸಿ, ಪರ್ಯಾಯ ವ್ಯವಸ್ಥೆಯನ್ನು ತಕ್ಷಣ ಜಾರಿಗೆ ತರಬೇಕೆಂದು ನಿರ್ದೇಶಿಸಿದರು.

ಈ ವೇಳೆ ಮಾತನಾಡಿದ ಕೆ.ಎಸ್. ಲತಾಕುಮಾರಿ, ಸಕಲೇಶಪುರ ಸುಂದರ ನಗರ. ಹಲವರು ಹೇಳುವಂತೆ ಇದು ಮಲೆನಾಡಿನ ಹೆಬ್ಬಾಗಿಲು. ಇಲ್ಲಿಂದಲೇ ಘಟ್ಟ ಪ್ರದೇಶಗಳಿಗೆ ತೆರಳಬೇಕಾಗುತ್ತದೆ. ಅಷ್ಟು ಸುಂದರವಾದ ನಗರವನ್ನು ಇನ್ನೂ ಸುಂದರವಾಗಿರಿಸಲು ನಮ್ಮೆಲ್ಲರ ಜವಾಬ್ದಾರಿ ಇದೆ ಎಂದರು.

ನಗರದಲ್ಲಿ ಅನೇಕ ಸಮಸ್ಯೆಗಳ ಬಗ್ಗೆ ದೂರುಗಳು ಬಂದ ಹಿನ್ನೆಲೆಯಲ್ಲಿ, ನಗರಸಭೆ, ಖಾದಿ ಇಲಾಖೆ ಸೇರಿದಂತೆ ಸಂಬಂಧಿತ ಎಲ್ಲಾ ಅಧಿಕಾರಿಗಳೊಂದಿಗೆ ಪರಿಶೀಲನೆ

> ಪಶ್ಚಿಮ ಘಟ್ಟವನ್ನು ಹೊಂದಿರುವ ಸಕಲೇಶಪುರ ಪ್ರವಾಸಿಗರ ನೆಚ್ಚಿನ ತಾಣವಾಗಿದೆ. ಇಲ್ಲಿಗೆ ನಿತ್ಯ ಅನೇಕ ಜನರು ಬರುತ್ತಾರೆ. ಆದ್ದರಿಂದ ಸ್ವಚ್ಛತೆ, ರಸ್ತೆ, ಮೂಲ ಸೌಕರ್ಯಕ್ಕೆ ಆದ್ಯತೆ ನೀಡಬೇಕು. ಪಟ್ಟಣ ಅಂದವಾಗಿರಬೇಕೆಂದರೆ ಸಾರ್ವಜನಿಕರು ಸಹಕಾರ ನೀಡಬೇಕು.
>
> **- ಕೆ.ಎಸ್. ಲತಾಕುಮಾರಿ, ಜಿಲ್ಲಾಧಿಕಾರಿ**



ನಡೆಸಲಾಗಿದೆ. ಸಮಸ್ಯೆಗಳ ಪರಿಹಾರಕ್ಕಾಗಿ ತಕ್ಷಣ ಕ್ರಮ ಕೈಗೊಳ್ಳಲಾಗುವುದು ಎಂದು ಭರವಸೆ ನೀಡಿದರು.

ಪ್ರತಿ ವಾರ ಸಿಟಿ ರೌಂಡ್ ನಡೆಸಲಾಗುತ್ತಿದ್ದು, ಫುಟ್‌ಪಾತ್ ಅತಿಕ್ರಮಣ, ರಸ್ತೆ ಅವ್ಯವಸ್ಥೆ, ವಿಶೇಷವಾಗಿ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣದ ಸುತ್ತಮುತ್ತ ಪಾರ್ಕಿಂಗ್ ಸಮಸ್ಯೆಗಳು ಸೇರಿ ಹಲವು ಸಮಸ್ಯೆಗಳು ಕಂಡುಬಂದಿವೆ. ನಿಗದಿತ ಅವಧಿಯೊಳಗೆ ಎಲ್ಲ ಸಮಸ್ಯೆಗಳಿಗೂ ಪರಿಹಾರ ಒದಗಿಸಲಾಗುವುದು ಎಂದು ಹೇಳಿದರು.

ಫುಟ್‌ಪಾತ್‌ಗಳು ಸಂಪೂರ್ಣವಾಗಿ ಅತಿಕ್ರಮಣಗೊಂಡಿರುವ ಹಿನ್ನೆಲೆಯಲ್ಲಿ, ನಗರಸಭೆಯ ಮುಖ್ಯಾಧಿಕಾರಿ ಮಹೇಶ್ವರ್ ಅವರಿಗೆ ಸ್ಪಷ್ಟ ಸೂಚನೆ ನೀಡಲಾಗಿದ್ದು, ಫುಟ್‌ಪಾತ್‌ಗಳನ್ನು ಸಂಪೂರ್ಣವಾಗಿ ತೆರವುಗೊಳಿಸಿ ಸಾರ್ವಜನಿಕರಿಗೆ ಮುಕ್ತವಾಗಿ ಓಡಾಡಲು ಅವಕಾಶ ಕಲ್ಪಿಸಬೇಕು ಎಂದು ಆದೇಶಿಸಲಾಗಿದೆ ಎಂದು ಜಿಲ್ಲಾಧಿಕಾರಿ ತಿಳಿಸಿದರು.

ನಗರ ಸ್ವಚ್ಛವಾಗಿರಲು ನಾಗರಿಕರ ಸಹಕಾರ ಅತ್ಯಂತ ಮುಖ್ಯವಾಗಿದೆ. ಪೌರಕಾರ್ಮಿಕರು ಕಸ ತೆರವುಗೊಳಿಸಿದ ಬಳಿಕ ಮತ್ತೆ ಅದೇ ಸ್ಥಳದಲ್ಲಿ ಕಸ ಎಸೆಯುತ್ತಿರುವುದು ಕಂಡುಬಂದಿದ್ದು, ನಾಗರಿಕರು ಕಸವನ್ನು ನಿಗದಿತ ಸ್ಥಳದಲ್ಲೇ ಹಾಕಬೇಕು ಎಂದು ಮನವಿ ಮಾಡಿದರು. ಬಸ್ ನಿಲ್ದಾಣದ ಸುತ್ತಮುತ್ತ ಎಲ್ಲೆಂದರಲ್ಲಿ ಉಗುಳಿರುವುದು ಗಮನಕ್ಕೆ ಬಂದಿದ್ದು, ಇಂತಹ ವರ್ತನೆ ತೊರೆಯುವಂತೆ ಕೋರಿದರು.

ಫುಟ್‌ಪಾತ್‌ಗಳು ಪಾದಚಾರಿಗಳಿಗಾಗಿ ಮಾತ್ರವಾಗಿದ್ದು, ಅವುಗಳನ್ನು ಅಂಗಡಿಗಳ ವಸ್ತು ಇಡುವುದಕ್ಕೆ ಬಳಸಬಾರದು. ಫುಟ್‌ಪಾತ್ ತೆರವಾಗಿದ್ದರೆ ರಸ್ತೆ ಸುರಕ್ಷತೆ ಹೆಚ್ಚಾಗುತ್ತದೆ. ಆದ್ದರಿಂದ ಫುಟ್‌ಪಾತ್ ತೆರವುಗೊಳಿಸುವುದೇ ಮೊದಲ ಆದ್ಯತೆ ಆಗಿದ್ದು, ಈ ಕಾರ್ಯದಲ್ಲಿ ಜನರ ಸಂಪೂರ್ಣ ಸಹಕಾರ ಅಗತ್ಯವಿದೆ ಎಂದು ಜಿಲ್ಲಾಧಿಕಾರಿ ಹೇಳಿದರು.

ಸಕಲೇಶಪುರ ಡಿಪೋ ಹಿಂದೆ ಹಾಸನ ವಿಭಾಗದಲ್ಲಿತ್ತು. ನಂತರ ಚಿಕ್ಕಮಗಳೂರು ವಿಭಾಗಕ್ಕೆ ಸೇರಿಸಲಾಗಿತ್ತು. ಇದೀಗ ಮತ್ತೆ ಹಾಸನ ವಿಭಾಗಕ್ಕೆ ಸೇರಿಸಬೇಕೆಂಬ ಬೇಡಿಕೆ ಇರುವುದನ್ನು ಸರ್ಕಾರದ ಗಮನಕ್ಕೆ ತಂದಿದ್ದೇನೆ ಎಂದು ತಿಳಿಸಿದರು.

ತಹಸೀಲ್ದಾರ್ ಸುಪ್ರೀತ ತಾಲೂಕು ಪಂಚಾಯಿತಿ ಕಾರ್ಯನಿರ್ವಹಣಾಧಿಕಾರಿ ಗಂಗಾಧರ್, ಪುರಸಭಾ ಮುಖ್ಯಾಧಿಕಾರಿ ಮಹೇಶ್ವರಪ್ಪ, ವಲಯ ಅರಣ್ಯ ಅಧಿಕಾರಿ ಹೇಮಂತ್ ಕುಮಾರ್, ಕಂದಾಯ ಇಲಾಖೆಯ ದಾನ್ ಪ್ರಕಾಶ್, ನಟರಾಜ್, ಪ್ರಕಾಶ್ ಹಾಗೂ ಇತರರಿದ್ದರು.

## ಪತ್ರಕರ್ತರು-ಪೊಲೀಸರ ಸೌಹಾರ್ದ ಕ್ರಿಕೆಟ್ ಪಂದ್ಯಾವಳಿ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ನಗರದ ಡಿಎಆರ್ ಮೈದಾನದಲ್ಲಿ ಮಂಗಳವಾರ ಜಿಲ್ಲಾ ಪೊಲೀಸರು ಮತ್ತು ಜಿಲ್ಲಾ ಪತ್ರಕರ್ತರ ಸಂಘದ ನಡುವೆ ಸೌಹಾರ್ದಯುತ ಕ್ರಿಕೆಟ್ ಪಂದ್ಯಾವಳಿ ನಡೆಯಿತು.

ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಡಾ. ಶ್ರೀನಿಧಿ, ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಜೆ.ಆರ್. ಕೆಂಚೇಗೌಡ ಹಾಗೂ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಉಪಾಧ್ಯಕ್ಷ ಎಚ್.ಬಿ.ಮದನಗೌಡ ಬ್ಯಾಟಿಂಗ್ ಮತ್ತು ಬೌಲಿಂಗ್ ಮಾಡುವ ಮೂಲಕ ಪಂದ್ಯಾವಳಿಗೆ ಚಾಲನೆ ನೀಡಿದರು.

ಶ್ರೀನಿಧಿ ಮಾತನಾಡಿ, ಜಿಲ್ಲೆಯಲ್ಲಿ ಮೊದಲಿಂದಲೂ ಪೊಲೀಸರು ಮತ್ತು ಪತ್ರಕರ್ತರ ನಡುವೆ ಕ್ರಿಕೆಟ್ ಪಂದ್ಯಾವಳಿ ನಡೆಯುತ್ತಾ ಬಂದಿದೆ. ಇಬ್ಬರೂ ಒಂದೊಂದು ರೀತಿಯಲ್ಲಿ ಸಾಮಾಜಿಕ ಸೇವೆಯಲ್ಲಿ ತೊಡಗಿ ಸಾರ್ವಜನಿಕ ಸೇವೆ ಮಾಡುತ್ತಿರುತ್ತೇವೆ. ಪೊಲೀಸರು-ಪತ್ರಕರ್ತರ ನಡುವೆ ಅವಿನಾಭಾವ ಸಂಬಂಧ ಇರುವುದು ಒಳ್ಳೆಯ ಬೆಳವಣಿಗೆ, ಇದು ಹೀಗೆಯೇ ಮುಂದುವರಿಯುವುದು ಸ್ವಾಗತಾರ್ಹ ಹಾಗೂ ಉತ್ತಮ ಬೆಳವಣಿಗೆ ಎಂದರು.



ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಉಪಾಧ್ಯಕ್ಷ ಎಚ್.ಬಿ.ಮದನಗೌಡ ಮಾತನಾಡಿ, ಪೊಲೀಸರು ಮತ್ತು ಪತ್ರಕರ್ತರು ಸದಾ ಒತ್ತಡದಲ್ಲಿ ಕೆಲಸ ಮಾಡುವವರು. ಸಿಕ್ಕ ಬಿಡುವಿನಲ್ಲಿ ಈ ರೀತಿಯ ಪಂದ್ಯಾವಳಿ ಆಡುವುದು ಇಬ್ಬರ ನಡುವೆ ಬಾಂಧವ್ಯ ವೃದ್ಧಿಗೆ ಸಹಕಾರಿ ಆಗಲಿದೆ. ಸಂಬಂಧ ಮತ್ತಷ್ಟು ಗಟ್ಟಿಯಾಗಲಿದೆ ಎಂದು ಹೇಳಿದರು. ಜಿಲ್ಲೆಯಲ್ಲಿ ಹಿಂದಿನಿಂದಲೂ ಪೊಲೀಸರು ಮತ್ತು ಪತ್ರಕರ್ತರ ನಡುವೆ ಉತ್ತಮ ಸ್ನೇಹ ಸಂಬಂಧ, ಬಾಂಧವ್ಯ ಇದೆ. ಅದು ಹೀಗೆಯೇ ಮುಂದುವರಿಯಲಿ ಎಂದು ಆಶಿಸಿದರು.

ಸಂಘದ ಜಿಲ್ಲಾಧ್ಯಕ್ಷ ಜೆ.ಆರ್. ಕೆಂಚೇಗೌಡ ಮಾತನಾಡಿ, ಯಾವುದೇ ಕ್ರೀಡೆಯಲ್ಲಿ ಸೋಲು- ಗೆಲುವು ಸಾಮಾನ್ಯ. ಸೋತಾದ ಕುಗ್ಗದೆ, ಗೆದ್ದಾಗ ಹಿಗ್ಗದೆ ಪ್ರೀತಿ, ಸ್ನೇಹ ಬಾಂಧವ್ಯ ಮುಂದುವರಿಸಿಕೊಂಡು ಹೋಗಬೇಕು. ಅದಕ್ಕಾಗಿ ಪಂದ್ಯಾವಳಿ ಆಯೋಜನೆ ಮಾಡಿದ್ದೇವೆ. ಎಲ್ಲರೂ ಕ್ರೀಡಾ ಮನೋಭಾವದಿಂದ ಆಡಿ ಗೆಲುವು ಸಾಧಿಸಿ ಎಂದು ನುಡಿದರು.

ಸಕಲೇಶಪುರ ಡಿವೈಎಸ್ಪಿ ಮಾಲತೇಶ್, ಜಿಲ್ಲಾ ಪತ್ರಕರ್ತರ ಸಂಘದ ಉಪಾಧ್ಯಕ್ಷರಾದ ಎನ್ .ನಂಜುಂಡೇಗೌಡ, ಜಿ.ಪ್ರಕಾಶ್, ಮಾಜಿ ಅಧ್ಯಕ್ಷರಾದ ಬಾಳ್ಳುಗೋಪಾಲ್, ಬಿ.ಆರ್.ಉದಯಕುಮಾರ್, ರವಿ ನಾಕಲಗೂಡು, ಹಿರಿಯ ಪತ್ರಕರ್ತ ಉದಯ ರವಿ, ಸಂಘದ ಪದಾಧಿಕಾರಿಗಳಾದ ಕೆ.ಜಿ.ಸುರೇಶ್, ಬಿ.ಆರ್. ಬೊಮ್ಮೇಗೌಡ, ಕೆ.ಎಂ. ಹರೀಶ್, ಕುಶ್ವಂತ್, ತ್ಯಾಗರಾಜ್ (ಪ್ರಕಾಶ್ ಟಿವಿ5) ಹಾಗೂ ಕಾರ್ಯಕಾರಿ ಸಮಿತಿ ಸದಸ್ಯರು ಹಾಗೂ ವಿವಿಧ ಸುದ್ದಿ-ಮಾಧ್ಯಮಗಳ ಪತ್ರಕರ್ತರು ಇದ್ದರು. ಬೆಸ್ಟ್ ಆಫ್ ತ್ರಿ ಪಂದ್ಯಗಳಲ್ಲಿ ಉತ್ತಮವಾಗಿ ಆಟ ಆಡಿದ ಪೊಲೀಸ್ ತಂಡ ಜಯಭೇರಿ ಬಾರಿಸಿತು. ವಿಜೇತ ತಂಡಗಳ ನಾಯಕರಾದ ಡಿವೈಎಸ್ಪಿ ಮಾಲತೇಶ್, ಇನ್ಸ್‌ಪೆಕ್ಟರ್ ವಿನಯ್ ಅವರಿಗೆ ಜಿಲ್ಲಾ ಪತ್ರಕರ್ತರ ಸಂಘದ ಪರವಾಗಿ ಜೆ.ಆರ್.ಕೆಂಚೇಗೌಡ ಮತ್ತು ಎಚ್.ಬಿ.ಮದನಗೌಡ ಅವರು 5 ಸಾವಿರ ರೂ. ನಗದು ಬಹುಮಾನ ನೀಡಿ ಅಭಿನಂದಿಸಿದರು. ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮೊಹಮ್ಮದ್ ಸುಜೀತಾ ಅವರನ್ನು ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷರು-ಪದಾಧಿಕಾರಿಗಳು ಹಾಗೂ ಪತ್ರಕರ್ತರು ಅಭಿನಂದಿಸಿದರು.

## ಕೃಷಿಯಲ್ಲಿ ಆಧುನಿಕತೆ ಅಳವಡಿಸಿಕೊಳ್ಳಲು ಸಲಹೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಅರಸೀಕೆರೆ: ಸಾಂಪ್ರದಾಯಿಕ ಕೃಷಿಯ ಜೊತೆಗೆ ಆಧುನಿಕ ತಂತ್ರಜ್ಞಾನ ಅಳವಡಿಸಿಕೊಂಡು ಹೆಚ್ಚಿನ ಉತ್ಪಾದನೆ ಪಡೆಯುವತ್ತ ರೈತರು ಗಮನ ಹರಿಸಬೇಕು ಎಂದು ಶಾಸಕ ಕೆ.ಎಂ. ಶಿವಲಿಂಗೇಗೌಡ ಹೇಳಿದರು.

ತಾಲೂಕು ಪಂಚಾಯಿತಿ ಆವರಣದಲ್ಲಿ ಕೃಷಿ ಇಲಾಖೆ, ಕೃಷಿಕ ಸಮಾಜ ಹಾಗೂ ರೈತಪರ ಸಂಘಟನೆಗಳ ಸಹಯೋಗದಲ್ಲಿ ಆಯೋಜಿಸಿದ್ದ ರಾಷ್ಟ್ರೀಯ ರೈತ ದಿನಾಚರಣೆ ಉದ್ಘಾಟಿಸಿ ಮಾತನಾಡಿ, ಮಹಾತ್ಮ ಗಾಂಧೀಜಿ ಅವರ ಗ್ರಾಮ ಸ್ವರಾಜ್ಯ ಕನಸು ನನಸಾಗಬೇಕೆಂದರೆ ದೇಶಕ್ಕೆ ಅನ್ನ ನೀಡುವ ರೈತರ ಬಾಳು ಬೆಳಗಬೇಕೆಂದು ಹೇಳಿದರು.

ರೈತರು ಬೆವರು ಸುರಿಸಿ ದುಡಿದರೆ ಸಮಾಜಕ್ಕೆ ಅನ್ನ ಸಿಗುವುದರ ಜೊತೆಗೆ ದೇಶದ ಅಭಿವೃದ್ಧಿಗೆ ಸಹಕಾರವಾಗುತ್ತದೆ. ಭಾರತದಲ್ಲಿ ಶೇ. 75 ರಿಂದ 80ರಷ್ಟು ಜನರು ರೈತರೇ ಆಗಿದ್ದಾರೆ. ಕೃಷಿಯನ್ನೇ ನಂಬಿ ಬದುಕುತ್ತಿರುವ ರಾಷ್ಟ್ರಗಳಲ್ಲಿ ಭಾರತ ಅಗ್ರ ಸ್ಥಾನದಲ್ಲಿದೆ ಎಂದು ತಿಳಿಸಿದರು. ಮೆಕ್ಕೆಜೋಳವನ್ನು ವಾಣಿಜ್ಯ ಬೆಳೆಯಾಗಿ ಪರಿಗಣಿಸಿ ಎಥೆನಾಲ್ ಉತ್ಪಾದನೆ ಸೇರಿ ಮೌಲ್ಯವರ್ಧಿತ ಕೃಷಿಗೆ ಮುಂದಾದರೆ ರೈತರಿಗೆ ಲಾಭ



ದೊರೆಯುತ್ತದೆ. ಕಬ್ಬು ಮತ್ತು ಮೆಕ್ಕೆ ಜೋಳವನ್ನು ದೇಶದಲ್ಲೇ ಖರೀದಿಸಿ ಎಥೆನಾಲ್ ಉತ್ಪಾದಿಸಬಹುದಾದರೂ ಈ ಬಗ್ಗೆ ಕೇಂದ್ರ ಸರ್ಕಾರ ಸ್ಪಷ್ಟ ನೀತಿ ರೂಪಿಸದಿರುವುದು ಬೇಸರದ ಸಂಗತಿ ಎಂದರು.

ತಾಲೂಕಿನಲ್ಲಿ ರೈತರ ಹಿತದೃಷ್ಟಿಯಿಂದ ತರಕಾರಿ ಮಾರುಕಟ್ಟೆ, ನಿರಂತರ ಜ್ಯೋತಿ ವ್ಯವಸ್ಥೆ, ನೀರಿನ ಸಂರಕ್ಷಣೆಗೆ 2 ಸಾವಿರಕ್ಕೂ ಅಧಿಕ ಚೆಕ್ ಡ್ಯಾಂಗಳ ನಿರ್ಮಾಣ ಸೇರಿ ಹಲವು ಅಭಿವೃದ್ಧಿ ಕಾರ್ಯ ಕೈಗೊಳ್ಳಲಾಗಿದೆ. ಎತ್ತಿನಹೊಳೆ, ಭದ್ರ ಮೇಲ್ದಂಡೆ ಹಾಗು ಹೇಮಾವತಿ ನೀರಾವರಿ ಯೋಜನೆಗಳ ಅನುಷ್ಠಾನದಿಂದ ಮುಂದಿನ ವರ್ಷಗಳಲ್ಲಿ ಬರಗಾಲದ ಆತಂಕದಿಂದ ರೈತರು ಮುಕ್ತರಾಗಲಿದ್ದಾರೆ ಎಂದರು.

ಸಹಾಯಕ ಕೃಷಿ ನಿರ್ದೇಶಕ ಶಿವಕುಮಾರ್ ಮಾತನಾಡಿ, ದಿ. ಮಾಜಿ ಪ್ರಧಾನಿ ಚೌಧರಿ ಚರಣ್ ಸಿಂಗ್ ಅವರ ಜನ್ಮ ದಿನವನ್ನು ರಾಷ್ಟ್ರೀಯ ರೈತ ದಿನಾಚರಣೆಯಾಗಿ ಆಚರಿಸಲಾಗುತ್ತಿದೆ. 1979ರಿಂದ 1980ರ ವರೆಗೆ ಪ್ರಧಾನಿಯಾಗಿ ಸೇವೆ ಸಲ್ಲಿಸಿದ ಅವರು ರೈತ ನಾಯಕ ಹಾಗೂ ಜನಾನುರಾಗಿ ಎಂದು ಖ್ಯಾತರಾಗಿದ್ದರು. ರೈತರ ಸಾಲಭಾರ ನಿವಾರಣೆಗೆ ಸಂಬಂಧಿಸಿದ ಮಸೂದೆಯನ್ನು ಪರಿಚಯಿಸಿದ ಕೀರ್ತಿ ಅವರಿಗೆ ಸಲ್ಲುತ್ತದೆ ಎಂದರು.

ದೇಶದ ಅಭಿವೃದ್ಧಿಗೆ ರೈತರ ಆರ್ಥಿಕ ಬೆಳವಣಿಗೆ ಪ್ರಮುಖವಾಗಿದ್ದು, ರಾಷ್ಟ್ರದ ಜನಸಂಖ್ಯೆಯ ಶೇ. 80ರಷ್ಟು ಮಂದಿ ರೈತ ವರ್ಗಕ್ಕೆ ಸೇರಿದವರಾಗಿದ್ದಾರೆ. ರೈತ ದಿನಾಚರಣೆ ಅರ್ಥಪೂರ್ಣವಾಗಬೇಕೆಂದರೆ ಸರ್ಕಾರದ ಯೋಜನೆಗಳು ಪರಿಣಾಮಕಾರಿಯಾಗಿ ರೈತರಿಗೆ ತಲುಪಬೇಕೆಂದರು.

ತಾಲ್ಲೂಕು ಗ್ಯಾರಂಟಿ ಸಮಿತಿ ಅಧ್ಯಕ್ಷ ಧರ್ಮಶೇಖರ್ ಮಾತನಾಡಿ, ಸರ್ಕಾರವು ರೈತರಿಗಾಗಿ ಅನೇಕ ಜನಪರ ಯೋಜನೆಗಳನ್ನು ಅನುಷ್ಠಾನಗೊಳಿಸುತ್ತಿದೆ. ಆದರೆ, ಯೋಜನೆಗಳನ್ನು ತಾಲೂಕು ಮಟ್ಟಕ್ಕೆ ತಂದು ರೈತರಿಗೆ ನೇರವಾಗಿ ತಲುಪಿಸುವಲ್ಲಿ ಶಾಸಕರ ಪಾತ್ರ ಅಪೂರ್ವವಾಗಿದೆ. ರೈತರಿಗೆ ಅಗತ್ಯವಿರುವ ವಿದ್ಯುತ್, ನೀರು ಹಾಗು ಸರ್ಕಾರದ ಯಂತ್ರೋಪಕರಣಗಳು ಸಮಯಕ್ಕೆ ಸರಿಯಾಗಿ ದೊರಕುವಂತೆ ಕಾರ್ಯನಿರ್ವಹಿಸಲಾಗುತ್ತಿದೆ ಎಂದು ಪ್ರಶಂಸಿಸಿದರು.

ಬರಪೀಡಿತ ಪ್ರದೇಶವಾಗಿದ್ದ ಅರಸೀಕೆರೆ ತಾಲ್ಲೂಕಿಗೆ ವಿವಿಧ ಮೂಲಗಳಿಂದ ನೀರು ತರಿಸಿ ನೀರಾವರಿಗೆ ಆದ್ಯತೆ ನೀಡಲಾಗಿದೆ. ಅದರಿಂದ ರೈತ ಸಮುದಾಯಕ್ಕೆ ಭಾರೀ ಅನುಕೂಲವಾಗುತ್ತಿದೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಸ್ವಸಹಾಯ ಸಂಘಗಳ ಮಹಿಳೆಯರಿಗೆ 50,000 ರೂ. ಸ್ವತ್ತು ನಿಧಿ ವಿತರಿಸಲಾಯಿತು. ಕಾರ್ಯಕ್ರಮ ಅಂಗವಾಗಿ ಎತ್ತಿನಗಾಡಿ ಮೆರವಣಿಗೆ ನಡೆಸಲಾಯಿತು. ತಹಶೀಲ್ದಾರ್ ಸಂತೋಷ್ ಕುಮಾರ್, ಜಿಲ್ಲಾ ರೈತ ಸಂಘದ ಅಧ್ಯಕ್ಷ ದಯಾನಂದ್, ಟಿಪಿಎಂಸಿ ಅಧ್ಯಕ್ಷ ಕುಮಾರ್ ಮತ್ತಿತರರಿದ್ದರು.

## ಮಾಜಿ ಯೋಧ ಆತ್ಮಹತ್ಯೆಗೆ ಶರಣು



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಳೇಬೀಡು: ಮಾಜಿ ಯೋಧರೊಬ್ಬರು ತಲೆಗೆ ರಿವಾಲ್ವರ್‌ನಿಂದ ಗುಂಡು ಹಾರಿಸಿಕೊಂಡು ಸ್ಥಳದಲ್ಲಿಯೇ ಮೃತಪಟ್ಟ ಘಟನೆ ಘಟ್ಟದಹಳ್ಳಿ ರೈತರ ಕೊಪ್ಪಲಿನಲ್ಲಿ ನಡೆದಿದೆ.

ಸಿಆರ್‌ಪಿಎಫ್ ಯೋಧರಾಗಿ ಸೇವೆ ಸಲ್ಲಿಸಿದ್ದ ಕಲ್ಲೇಶ್ (60) ಮೃತರು. ನಿವೃತ್ತರಾದ ನಂತರ ಅವರು ಗ್ರಾಮದಲ್ಲಿ ಕೃಷಿ ಕಾಯಕ ನಡೆಸುತ್ತಿದ್ದರು. ಅವರ ಆತ್ಮಹತ್ಯೆಗೆ ನಿಖರವಾದ ಕಾರಣ ತಿಳಿದು ಬಂದಿಲ್ಲ. ಕಲ್ಲೇಶ್ ಅವರಿಗೆ ಇಬ್ಬರು ಪತ್ನಿಯರಿದ್ದಾರೆ. ಮೊದಲ ಪತ್ನಿ ಸೀತಾ ಲಕ್ಷ್ಮ್ಮಿ ಹಾಗೂ ಕಲ್ಲೇಶ್ ವಿಚ್ಛೇದನ ಆಗಿತ್ತು. ಸೀತಾ ಲಕ್ಷ್ಮ್ಮಿ ಅವರಿಗೆ ಒರ್ವ ಪುತ್ರ ಇದ್ದಾರೆ. ಎರಡನೇ ಪತ್ನಿ ಧರ್ಮಮ್ಮ ಅವರಿಗೆ ಒರ್ವ ಪುತ್ರ ಮತ್ತೋರ್ವ ಪುತ್ರಿ ಇದ್ದಾರೆ. ಮಾಜಿ ಯೋಧ ಕಲ್ಲೇಶ್ ಸಿಆರ್‌ಪಿಎಫ್ ಸೇವೆಯಿಂದ ಮರಳಿದ್ದರಿಂದ ದೇಶ ರಕ್ಷಣೆಯಲ್ಲಿ ಅವರಿಗಾದ ಅನುಭವ ಹಂಚಿಕೊಳ್ಳುತ್ತಿದ್ದರು. ಈಚೆಗೆ ಮಾನಸಿಕವಾಗಿ ನೊಂದಿದ್ದರು ಎಂದು ಗ್ರಾಮಸ್ಥರು ಹೇಳಿದರು. ಹಳೇಬೀಡು ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ದೀಪು ಚಂದ್ರ ದಾಸ್ ನಿಧನಕ್ಕೆ ಸಕಲೇಶಪುರದಲ್ಲಿ ಸಂತಾಪ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಸಕಲೇಶಪುರ: ಬಾಂಗ್ಲಾದೇಶದಲ್ಲಿ ಹಿಂದು ಯುವಕ ದೀಪು ಚಂದ್ರ ದಾಸ್ ಹತ್ಯೆ ಹಿನ್ನೆಲೆಯಲ್ಲಿ ಹಿಂದು ಹಿತರಕ್ಷಣಾ ವೇದಿಕೆ ವತಿಯಿಂದ ಪಟ್ಟಣದ ಹಳೆ ಬಸ್ ನಿಲ್ದಾಣದಲ್ಲಿ ಸಂಜೆ ಶ್ರದ್ಧಾಂಜಲಿ ಸಲ್ಲಿಸಲಾಯಿತು.

ವೇದಿಕೆ ತಾಲೂಕು ಅಧ್ಯಕ್ಷ ಮಂಜುನಾಥ ಕಬ್ಬಿನಗದ್ದೆ ಮಾತನಾಡಿ, ಸಕಲೇಶಪುರ ಹಾಗೂ ಸುತ್ತಮುತ್ತಲಿನ ಕಾಫಿ ತೋಟಗಳಲ್ಲಿ ಅಸ್ಸಾಮಿಗರು ಎಂಬ ಹೆಸರಿನಲ್ಲಿ ಕೆಲಸ ಮಾಡುತ್ತಿರುವ ಕೂಲಿ ಕಾರ್ಮಿಕರು ಬಹುತೇಕ ಮೂಲತಃ ಬಾಂಗ್ಲಾದೇಶದವರಾಗಿರಬಹುದೆಂಬ ಅನುಮಾನಗಳಿವೆ. ಈ ಬಗ್ಗೆ ಆಡಳಿತ ಗಂಭೀರ ತನಿಖೆ ನಡೆಸಬೇಕು. ಅಲ್ಲದೆ ಕೆಲವರು ನಗರ ಪ್ರದೇಶಗಳಲ್ಲಿ ಬಾಡಿಗೆ ಮನೆಗಳಲ್ಲಿ ವಾಸಿಸುತ್ತಿದ್ದು, ಮಾರುಕಟ್ಟೆ ಹಾಗೂ ಸಂತೆಯಲ್ಲಿ ಇವರಿಂದ ಅಕ್ರಮ ಚಟುವಟಿಕೆಗಳು ನಡೆಯುತ್ತಿವೆ ಎಂಬ ದೂರುಗಳಿವೆ. ಕೃಷಿ ಮಾರುಕಟ್ಟೆ ಹಾಗೂ ಸಂಬಂಧಪಟ್ಟ ಅಧಿಕಾರಿಗಳು ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದರು.

ಪಟ್ಟಣದ ರಾಘವೇಂದ್ರ ನಗರ, ಬಾಳೆಗದ್ದೆ, ಸಿಪಿಸಿ ಬೌಂಡರಿ, ವಾರ್ಡ್‌ಗಳ ಸಂಖ್ಯೆ 7, 8, 9 ಹಾಗೂ ಆಚಂಗಿಕುಡುಗರಹಳ್ಳಿ ಭಾಗಗಳಲ್ಲಿ ಬಾಡಿಗೆ ಮನೆಗಳಲ್ಲಿ ವಾಸಿಸುತ್ತಿರುವ ಕಾರ್ಮಿಕರ ಬಗ್ಗೆ




ಪರಿಶೀಲನೆ ನಡೆಸಬೇಕು. ಬಾಂಗ್ಲಾದೇಶದಲ್ಲಿ ನಡೆದ ದೀಪು ಚಂದ್ರ ದಾಸ್ ಹತ್ಯೆಯಂತಹ ಹಿಂಸಾತ್ಮಕ ಘಟನೆಗಳು ಮರುಕಳಿಸದಂತೆ ದೇಶದ ಭದ್ರತೆ ದೃಷ್ಟಿಯಿಂದ ಸರ್ಕಾರ ಎಚ್ಚರ ವಹಿಸಬೇಕು ಎಂದು ಆಗ್ರಹಿಸಿದರು.

ಮೇಣದ ಬತ್ತಿ ಹಚ್ಚಿ ಎರಡು ನಿಮಿಷ ಮೌನಾಚರಣೆ ಮೂಲಕ ಸಂತಾಪ ಸೂಚಿಸಲಾಯಿತು.

ಸಂಘಟನೆ ರಾಜ್ಯ ಮುಖಂಡ ರಘು ಸಕಲೇಶಪುರ, ತಾಲೂಕು ಸಂಚಾಲಕ ಶಿವಾನಂದ್, ಮುಖಂಡರಾದ ಕೌಶಿಕ್, ಪ್ರದೀಪ್ ಪೂಜಾರಿ, ವೀರೇಶ್, ಶ್ರೀಜಿತ್, ದುಷ್ಯಂತ್ ಗೌಡ, ಸಿದ್ದಾಪುರ ಶೇಖರ್, ಧರ್ಮರಾಜ್, ಆಟೋ ಲೋಕಿ, ರವಿ ಹೆಬ್ಬಸಾಲೆ, ಪ್ರಶಾಂತ್, ಆಟೋ ರವಿ ಇತರರಿದ್ದರು.

## ಅಕ್ರಮವಾಗಿ ಸಾಗಿಸುತ್ತಿದ್ದ ಅಕ್ಕಿ ವಶಕ್ಕೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಆಲೂರು: ಎರಡು ಲಾರಿಗಳಲ್ಲಿ ಅಕ್ರಮವಾಗಿ ಸಾಗಾಟವಾಗುತ್ತಿದ್ದ ಅಂದಾಜು 3 ಟನ್ ಅಕ್ಕಿಯನ್ನು ರಾಷ್ಟ್ರೀಯ ಹೆದ್ದಾರಿ 75ರ ಚೌಳಗೆರೆ ಟೋಲ್ ಗೇಟ್‌ನಲ್ಲಿ ಪೊಲೀಸರು ವಶಕ್ಕೆ ಪಡೆದು ಪ್ರಕರಣ ದಾಖಲಿಸಿದ್ದಾರೆ.

ಲಾರಿಯಲ್ಲಿರುವುದು ಪಡಿತರ ಅಕ್ಕಿಯೇ ಅಥವಾ ಬೇರೆ ಇಲಾಖೆಗೆ ಸೇರಿದೆಯೇ ಎಂಬುದನ್ನು ಪರಿಶೀಲಿಸಲು ಆಹಾರ ಇಲಾಖೆ ಉಪನಿರೀಕ್ಷಕರಿಗೆ ಕೋರಲಾಗಿತ್ತು. ರಾತ್ರಿ 10 ಗಂಟೆ ವರೆಗೆ ಠಾಣೆ ಆವರಣದಲ್ಲೇ ಎರಡು ಲಾರಿಗಳಿಂದ ಅಕ್ಕಿ ಮೂಟೆಗಳನ್ನು ಕೆಳಗಿಳಿಸಿ ತೂಕ ಹಾಕಿದ್ದು ಒಂದು ಲಾರಿಯಿಂದ 50 ಕೆ.ಜಿ. ಸಾಮರ್ಥ್ಯದ 290 ಮೂಟೆ ಹಾಗೂ ಮತ್ತೊಂದು ವಾಹನದಿಂದ 280 ಮೂಟೆಗಳು ಪತ್ತೆಯಾಗಿದೆ.




ಕೆಎ20ಎಸಿ2623 ನಂಬರ್‌ನ ವಾಹನದಲ್ಲಿ ದೊರೆತ 290 ಚೀಲ ಅಕ್ಕಿಯಲ್ಲಿ 209 ಚೀಲ ಕುಸಲಕ್ಕಿ, 100 ಚೀಲ ಸಾಮಾನ್ಯ ಅಕ್ಕಿಯಾಗಿದೆ. ಕೆಎ52ಬಿ6239 ನಂಬರ್‌ನ ಲಾರಿಯಲ್ಲಿ ಸಿಕ್ಕ 280 ಚೀಲಗಳಲ್ಲಿ 65 ಚೀಲ ಕುಸಲಕ್ಕಿ, 215 ಚೀಲ ಸಾಮಾನ್ಯ ಅಕ್ಕಿಯಾಗಿದೆ. ಎರಡು ವಾಹನಗಳಿಂದ 20 ಚೀಲಗಳನ್ನು ಪರಿಶೀಲಿಸಿದಾಗ ಅದು ಸರ್ಕಾರದಿಂದ ಸಾರ್ವಜನಿಕ ವಿತರಣಾ ಪದ್ಧತಿಯಡಿ ನೀಡಲಾಗುವ ಅನ್ನಭಾಗ್ಯ ಅಕ್ಕಿ ಎಂದು ಮೇಲ್ನೋಟಕ್ಕೆ ಕಂಡುಬಂದಿದೆ. ಆದರೆ, ಜಿಲ್ಲೆಯಲ್ಲಿ ನ್ಯಾಯಬೆಲೆ ಅಂಗಡಿಗಳ ಮೂಲಕ ಕುಸಲಕ್ಕಿ ವಿತರಿಸುವುದಿಲ್ಲ. ಮಂಗಳೂರು ಭಾಗದಲ್ಲಿ ಪಡಿತರ ಯೋಜನೆಯಡಿ ಕುಸಲಕ್ಕಿಯನ್ನು ನೀಡುತ್ತಾರೆಂಬ ಮಾಹಿತಿ ಇದ್ದು ಸರ್ಕಾರದ ಅನ್ನಭಾಗ್ಯ ಯೋಜನೆ ಅಕ್ಕಿಯನ್ನೇ ಅಕ್ರಮವಾಗಿ ಸಾಗಿಸುತ್ತಿದ್ದರೆಂಬ ಸಂಶಯ ಬಲವಾಗಿದೆ.

ಈ ಸಂಬಂಧ ಆಹಾರ ನಿರೀಕ್ಷಕ ಕೆ.ಸಿ.ಮೋಹನ್‌ಕುಮಾರ್ ನೀಡಿರುವ ದೂರು ಆಧರಿಸಿ ಪೊಲೀಸರು ಮುಂದಿನ ಕ್ರಮ ಕೈಗೊಂಡಿದ್ದಾರೆ.

# ಮಹಾಭಾರತ ಯುದ್ಧ ವಿರೋಧಿ ಕಾವ್ಯ: ಪ್ರೊ. ರಾಜೇಂದ್ರ ಚೆನ್ನಿ

## ಯುದ್ಧ ಏಳಿಗೆಗೆ ಮಾರಕ ಎಂಬುದು ಜನಜನಿತ । ಶಿವಮೊಗ್ಗದಲ್ಲಿ ಕವಿ ಕಾವ್ಯ ಸಮ್ಮೇಳನ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಶಿವಮೊಗ್ಗ: ಮಹಾಭಾರತ ಯುದ್ಧ ವಿರೋಧಿ ಕಾವ್ಯವಾಗಿದೆ ಎಂದು ಕುವೆಂಪು ವಿಶ್ವವಿದ್ಯಾಲಯದ ನಿವೃತ್ತ ಪ್ರಾಧ್ಯಾಪಕ ರಾಜೇಂದ್ರ ಚೆನ್ನಿ ಅಭಿಪ್ರಾಯಪಟ್ಟರು.

ಕೇಂದ್ರಕನ್ನಡ ಸಾಹಿತ್ಯ ವೇದಿಕೆ ಹಾಗೂ ಶಿವಮೊಗ್ಗ ಜಿಲ್ಲಾ ಘಟಕದಿಂದ ನಗರದ ಕುವೆಂಪು ವಿಶ್ವವಿದ್ಯಾನಿಲಯದ ಬಸವ ಸದನದಲ್ಲಿ ನಡೆದ ಅಖಿಲ ಕರ್ನಾಟಕ ಐದನೇ ಕವಿ ಕಾವ್ಯ ಸಮ್ಮೇಳನದ ಸರ್ವಾಧ್ಯಕ್ಷತೆ ವಹಿಸಿ ಮಾತನಾಡಿ, ಮಹಾಭಾರತ ಯುದ್ಧವು ಸಹೋದರರ ನಡುವಿನ ಯುದ್ಧವಾಗಿದ್ದು ಯುದ್ಧ ತಡೆಯಲು ಶ್ರೀ ಕೃಷ್ಣ ಎಷ್ಟೇ ಪ್ರಯತ್ನಪಟ್ಟರು ಯುದ್ಧ ನಡೆಯಿತು. ಅದರ ಪರಿಣಾಮ





ಭಾರತದ ಅನೇಕ ರಾಜವಂಶಗಳು ಅಳಿದು ಹೋದವು ಮತ್ತು ಯುದ್ಧವಾದ ಮೇಲೆ ಮಹಾಭಾರತದಲ್ಲಿ ವರ್ಣಿಸಿದ ಭಾರತದ ಸ್ಥಿತಿಗತಿಯನ್ನು ನೋಡಿದ ಮೇಲೆ ಯುದ್ಧ ಎಂದಿಗೂ ಕೂಡ ಬೇಡ ಎನ್ನುವ ಅಭಿಪ್ರಾಯ ಬರುತ್ತದೆಂದರು.

ಮನುಷ್ಯ ಮೂಲತ: ಶಾಂತಿ ಪ್ರಿಯ. ತನ್ನ ಬಾಳಿನ ಶಾಂತಿಗಾಗಿ ಆತ ಕಲೆ, ಸಾಹಿತ್ಯ, ಸಂಗೀತದಂತಹ ಅನೇಕ ವಿದ್ಯೆಗಳನ್ನು ಕಲಿಯುತ್ತಾನೆ. ಧಾರವಾಡದಲ್ಲಿ ಸಂಗೀತಕ್ಕೆ ಎಷ್ಟೊಂದು ಮಹತ್ವವನ್ನುಕೊಡುತ್ತಾರೆ ಎಂದರೆ ಅಲ್ಲಿನ ಪ್ರತಿ ವಿದ್ಯುತ್ ಕಂಬವು ಸುಮ್ಮನೆ ತಟ್ಟಿದರೆ ಹಿಂದೂಸ್ತಾನಿ ರಾಗ ಹೇಳುತ್ತದೆ. ಅದೇ ರೀತಿ ಶಿವಮೊಗ್ಗದಲ್ಲಿ ಒಂದು ಮರಕ್ಕೆ ಒರಗಿದರೆ ಆ ಮರ ಒಂದು ಕವನ ಹೇಳುತ್ತದೆ ಎಂಬ ಮಾತಿದೆ ಎಂದರು.

ಮನುಷ್ಯ ಕಾವ್ಯವನ್ನು ಮೊದಲು ಬರೆದ ಗದ್ಯಕ್ಕಿಂತ ಮೊದಲು ಪದ್ಯ ಉದಯಿಸಿತು. ಈ ದೇಶದ ಭಾಷೆಗಳಲ್ಲಿ ಕನ್ನಡ ಕೂಡ ಒಂದು. ಅದು ಹಲವು ಸಂಸ್ಕೃತಿ ಉಳಿಸಿಕೊಂಡು ಬಂದಿದೆ. ಬಹು ಭಾಷೆಗಳ ನಾಡು ಭಾರತ ಕನ್ನಡ ಕೂಡ ಹಲವು ಭಾಷೆ ಹೊಂದಿದೆ. ಹಾಗಾಗಿ ಹಲವು ಕನ್ನಡ ಎನ್ನುವುದು ಸರಿಯಾದ ಮಾತಾಗಿದೆ. ಕರ್ನಾಟಕದಲ್ಲಿ ಜನಿಸಿದ ಪಂಪ ರಾಜಸತ್ತೆಯನ್ನು ಪ್ರಶ್ನೆ ಮಾಡಿದನು, ಬಸವಣ್ಣ 12ನೇ ಶತಮಾನದಲ್ಲಿ ವಚನ ಸಾಹಿತ್ಯದ ಮೂಲಕ ಶ್ರಮ ಜೀವಿಗಳ ಕಾಯಕವೇ ಪವಿತ್ರ ಎಂದು ತೋರಿಸಿದರು ಎಂದು ಹೇಳಿದರು.

### ಪ್ರೀತಿಸುವ ಮನಸ್ಸು ಮುಖ್ಯ

ನಮ್ಮ ಸಂಸ್ಕೃತಿ ಎಂದರೆ ಯಾವುದೇ ಕಟ್ಟಡ ದೇವಸ್ಥಾನ ಅಗೆಯುವುದಲ್ಲ. ಅನೇಕ ಉಳಿ ಪೆಟ್ಟು ಬಿದ್ದು ಈ ದೇವಸ್ಥಾನ ಆಗಿದೆ ಎಂದು ಒಪ್ಪಬೇಕು. ಹಲವು ಧರ್ಮಗಳ ಸಾರ ದೇವಸ್ಥಾನವಾಗಿದೆ. ಕವಿಗಳಿಗೆ ಯಾರನ್ನುದ್ವೇಷಿಸುವ ಮನಸ್ಸು ಇಲ್ಲ. ಕೇವಲ ಪ್ರೀತಿಸುವ ಮನಸ್ಸು ಇದೆ. ನಮಗೆ ಇಂಗ್ಲಿಷರ ಬಗ್ಗೆ ದ್ವೇಷ ಮಾಡಬೇಕೆಂದರೆ ಶೇಕ್ಸಪಿಯರ್, ಮುಸ್ಲಿಂರನ್ನುದ್ವೇಷ ಮಾಡಬೇಕೆಂದರೆ ಗಾಲಿಬ್ ಅಡ್ಡ ಬರುತ್ತಾನೆ. ಯಾವ ಧರ್ಮವನ್ನೇ ದ್ವೇಷಿಸಲು ಹೊರಟಾಗ ಆ ಧರ್ಮದಲ್ಲಿರುವ ಕವಿಯ ಪ್ರೀತಿ ನಮಗೆ ಅಡ್ಡ ಬರುತ್ತದೆ. ಕವಿಯೇ ಹೇಳುವಂತೆ ಈ ಪ್ರೀತಿ ಎಂಬ ರೋಗಕ್ಕೆ ಮದ್ದು ಸಿಗದಿರಲಿ. ಈ ರೋಗ ಒಂದಲ್ಲಾ ಒಂದು ದಿನ ನಮ್ಮನ್ನು ಸ್ವರ್ಗಕ್ಕೆ ಒಯ್ಯುತ್ತದೆಂದರು.

ಅತ್ಯಂತ ಕಷ್ಟದ ಕಾಲದಲ್ಲಿ ಉತ್ತಮ ಪ್ರೀತಿಯ ಕಾವ್ಯ ಹುಟ್ಟುತ್ತದೆ. ಕಾವ್ಯ ಯಾವಾಗಲೂ ನಮಗೆ ಹೊಸದನ್ನು ಹೇಳಲೇಬೇಕು. ಒಬ್ಬ ಆದಿವಾಸಿ ಕವಿ ಹೇಳುವಂತೆ, ನಮ್ಮ ರೈತ ಹಸಿವಿನಿಂದ ಸಾಯುವ ಬದಲು ಆತ್ಮಹತ್ಯೆ ಮಾಡಿಕೊಳ್ಳಬೇಕು. ಏಕೆಂದರೆ ಆದಿವಾಸಿಗಳಿಗೆ ಸರ್ಕಾರದ ಯಾವುದೇ ವಸ್ತು ಸಿಗುವುದಿಲ್ಲ. ಸರ್ಕಾರಕ್ಕೆ ನಾವು ಇರುವುದೇ ಗೊತ್ತಿಲ್ಲ. ಆಳುವ ವರ್ಗದ ದ್ವೇಷ ಬಿಟ್ಟು ಯಾವುದು ನಮಗೆ ತಲುಪುವುದಿಲ್ಲ, ಹಾಗಾಗಿ ನಾವು ಹಾಗೆ ಸಾಯುವುದರ ಬದಲು ಆತ್ಮಹತ್ಯೆ ಮಾಡಿಕೊಳ್ಳಬೇಕು. ಆಗ ಮಾತ್ರ ಸರ್ಕಾರಕ್ಕೆ ನಾವಿರುವುದು ಗೊತ್ತಾಗುತ್ತದೆ ಎಂದು ಬೇಸರ ವ್ಯಕ್ತಪಡಿಸಿದರು.

ಸಮ್ಮೇಳನದ ಅಧ್ಯಕ್ಷರ ಕುರಿತು ಕುವೆಂಪು ವಿ.ವಿ. ಕನ್ನಡ ಭಾರತಿ ನಿರ್ದೇಶಕ ಪ್ರೊ. ನೆಲ್ಲಿಕಟ್ಟೆ ಎಸ್. ಸಿದ್ದೇಶ್ ಮಾತನಾಡಿದರು. ತುಮಕೂರಿನ ಡಾ. ಶೈಲ ನಾಗರಾಜ್ ಸಮ್ಮೇಳನದ ಅಧ್ಯಕ್ಷರಿಗೆ ಗೌರವ ಪ್ರದಾನ ಮಾಡಿದರು.

ಲೇಖಕಿ ಸಬಿತಾ ಬನ್ನಾಡಿ ಮಾತನಾಡಿ, ಕಥೆ ಕವನಗಳನ್ನು ಬರೆದ ಕವಯತ್ರಿಗೆ ಬೂಕರ್ ಪ್ರಶಸ್ತಿ ಬಂದಿದೆ. ಆದರೆ ನಮಗೆ ಅವರು ಮುಖ್ಯವಾಗುವುದು, ಅವರ ಮಾನಸಿಕ ಸ್ಥೈರ್ಯದ ವಿಚಾರವಾಗಿ ಎಂಬುದು ಅಷ್ಟೇ ಸತ್ಯ ಎಂದರು.

### ಹೊರ ಹಾಕುವುದೇ ಮೇಲ್ವರ್ಗದ ಪದ್ಧತಿ

ಅಧ್ಯಕ್ಷತೆ ವಹಿಸಿದ್ದ ರಂಜಾನ್ ದರ್ಗಾ ಮಾತನಾಡಿ, ಬಡವರಿಗೆ, ಆದಿವಾಸಿ ಜನರಿಗೆ ಏನು ಸಿಗುವುದಿಲ್ಲ. ಕೇವಲ ದ್ವೇಷ ಸಿಗುತ್ತದೆ. ಮಹಾಭಾರತದಲ್ಲಿ ತಮ್ಮಷ್ಟಕ್ಕೆ ತಾವೇ ಇದ್ದ ಮೂಲ ನಿವಾಸಿಗಳ ನಾಗರುಗಳ ಪ್ರದೇಶದ ಮೇಲೆ ಬೆಂಕಿ ಹಾಕಿ ಅವರನ್ನು ಕೊಂದು ಓಡಿಸಿ ಆ ಜಾಗದಲ್ಲಿ ಅರಮನೆ ಕಟ್ಟಲಾಯಿತು. ಮೇಲು ವರ್ಗದ ಸಂಸ್ಕೃತಿ ಎಂದರೆ ಅದು ಹೊರಹಾಕುವ ಸಂಸ್ಕೃತಿಯಾಗಿದೆ. ನಮ್ಮ ದೇವಸ್ಥಾನದಿಂದ ನಮ್ಮ ಮಠದಿಂದ ನಮ್ಮ ಮನೆಯಿಂದ ನಮ್ಮ ಶಿಕ್ಷಣ ಸಂಸ್ಥೆಯಿಂದ ನಮ್ಮ ಮದುವೆ ಮನೆಯಿಂದಎಲ್ಲರನ್ನೂ ಹೊರ ಹಾಕುತ್ತೇವೆ. ಆದರೆ ಶರಣ ಸಂಸ್ಕೃತಿ ಒಳಗೊಳ್ಳುವ ಸಂಸ್ಕೃತಿಯಾಗಿದೆ.ಇವನಾರವಇವನಾರವಎನ್ನದಿರಯ್ಯ ಇವ ನಮ್ಮವ ಇವ ನಮ್ಮವಎನ್ನಿರಯ್ಯ ಎಂದ ಬಸವಣ್ಣನವರು ಈ ನಾಡಿನ ಶರಣ ಸಂಸ್ಕೃತಿಯವರುಇದು ಒಳಗೊಳ್ಳುವ ಸಂಸ್ಕೃತಿಯಾಗಿದೆ ಎಂದರು.

ಕಾರ್ಯಕ್ರಮವನ್ನು ವೇದಿಕೆಯ ಟ್ರಸ್ಟಿ ಡಾ. ನಾರಾಯಣ್ ನಿರೂಪಿಸಿದರು. ಟ್ರಸ್ಟಿಗಳಾದ ಬಸವರಾಜ್, ದೇಸು ಆಲೂರು, ಸಮುದ್ರವಳ್ಳಿ ವಾಸು, ಡಾ.ಉಮರ್ ಬೀಜದಕಟ್ಟೆ ಉಪಸ್ಥಿತರಿದ್ದರು.

# ಡಾ. ಕಸ್ತೂರಿ ರಂಗನ್ ವರದಿ ತಿರಸ್ಕಾರ: ದೂರವಾದ ಆತಂಕ



ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಾಸನ: ಮಲೆನಾಡು ಭಾಗದ ಜನರಲ್ಲಿ ಭಾರೀ ಆತಂಕ ಉಂಟುಮಾಡಿದ್ದ ಡಾ. ಕಸ್ತೂರಿ ರಂಗನ್ ವರದಿಯನ್ನು ತಿರಸ್ಕರಿಸಿರುವ ರಾಜ್ಯ ಸರ್ಕಾರದ ಕ್ರಮ ಸ್ವಾಗತಾರ್ಹ ಎಂದು ಜಿಲ್ಲಾ ಕಾಂಗ್ರೆಸ್ ವಕ್ತಾರ ಡಿ.ಸಿ. ಸಣ್ಣಸ್ವಾಮಿ ತಿಳಿಸಿದ್ದಾರೆ.

ಸಕಲೇಶಪುರ ಮಲೆನಾಡು ಭಾಗದ ರೈತರು, ಕಾಫಿ ಬೆಳೆಗಾರರು, ಹೋಂ ಸ್ಟೇ, ರೆಸಾರ್ಟ್ ಹಾಗೂ ವಸತಿ ಗ್ರಾಮಗಳಲ್ಲಿ ಹತ್ತಾರು ವರ್ಷಗಳಿಂದ ಸ್ವಾಧೀನದಲ್ಲಿದ್ದು ಜೀವನಕ್ಕಾಗಿ ಕಾಫಿ, ಏಲಕ್ಕಿ, ಮೆಣಸು, ಶುಂಠಿ ಹಾಗೂ ಇನ್ನಿತರ ಬೆಳೆಗಳನ್ನು ಬೆಳೆದು ಬದುಕು ಸಾಗಿಸುತ್ತಿದ್ದರು. ಆದರೆ ಕಸ್ತೂರಿ ರಂಗನ್ ವರದಿಯಿಂದ ಈ ಭಾಗದ ಜನರಲ್ಲಿ ಆತಂಕ ಉಂಟಾಗಿತ್ತು. ಯಾವುದೇ ರೀತಿಯ ಗಣಿಗಾರಿಕೆ, ಕೈಗಾರಿಕೆ, ಕಟ್ಟಡ ನಿರ್ಮಾಣ, ಸಿಮೆಂಟ್, ಕಲ್ಲು, ರಾಸಾಯನಿಕ ಬಳಸಲು, ಜನವಸತಿ ನಿರ್ಮಿಸಲು ಅವಕಾಶವಿಲ್ಲ ಎಂಬ ಕಸ್ತೂರಿ ರಂಗನ್ ವರದಿ ಆತಂಕ ಸೃಷ್ಟಿಸಿತ್ತು. ಇದೀಗ ಡಾ. ಕಸ್ತೂರಿ ರಂಗನ್ ವರದಿಯನ್ನು ರಾಜ್ಯ ಸರ್ಕಾರ ತಿರಸ್ಕರಿಸಿರುವುದು ರೈತರು ಸೇರಿದಂತೆ ಪ್ರವಾಸೋದ್ಯಮಕ್ಕೂ ಸಹ ಹೆಚ್ಚು ಅನುಕೂಲವಾಗಲಿದೆ. ರೈತರ ಪರ ನಿಂತಿರುವ ರಾಜ್ಯ ಸರಕಾರದ ಕ್ರಮ ಸ್ವಾಗತಾರ್ಹ ಎಂದು ತಿಳಿಸಿದ್ದಾರೆ.

ಈ ಹಿಂದೆ ಕಸ್ತೂರಿ ರಂಗನ್ ವರದಿಯ ಬಗ್ಗೆ ಭಾರಿ ಪರ,ವಿರೋಧ ಚರ್ಚೆಗಳಾಗಿದ್ದವು, ಕಸ್ತೂರಿ ರಂಗನ್ ವರದಿ ಜಾರಿಗೊಂಡರೆ ಪಶ್ಚಿಮ ಘಟ್ಟ ಪ್ರದೇಶಗಳಲ್ಲಿ ಹೆಚ್ಚಿನ ನಿರ್ಬಂಧಗಳನ್ನು ಜಾರಿಗೊಳಿಸಿದರೆ ಅದರಿಂದ ಗ್ರಾಮದ ಜನರು ಗಂಭೀರ ಸಮಸ್ಯೆಗಳನ್ನು ಅನುಭವಿಸಬೇಕಾಗಿತ್ತು. ಜನರ ಜೀವನೋಪಾಯದ ಮೇಲೆ ಇದು ತೀವ್ರ ಪರಿಣಾಮ ಬೀರುವ ಸಾಧ್ಯತೆ ಇತ್ತು. ಪಶ್ಚಿಮ ಘಟ್ಟ ಪ್ರದೇಶವನ್ನು ಪರಿಸರ ಸೂಕ್ಷ್ಮ ಪ್ರದೇಶ ಎಂದು ಘೋಷಿಸುವ ಸಂಬಂಧ ಕೇಂದ್ರ ಸರ್ಕಾರ ಹೊರಡಿಸಿರುವ ಅಧಿಸೂಚನೆಯನ್ನು ರಾಜ್ಯ ಸರಕಾರ ತಿರಸ್ಕರಿಸಿರುವುದು, ಪರಿಸರ ಸೂಕ್ಷ್ಮ ವಲಯ ಹಾಗೂ ಸಂರಕ್ಷಿತ ಅರಣ್ಯ ಪ್ರದೇಶ ಹೊರತುಪಡಿಸಿ ಬೇರೆ ಪ್ರದೇಶದಲ್ಲಿ ಕೃಷಿ, ಮತ್ತಿತರ ಚಟುವಟಿಕೆ ಮುಂದುವರಿಸಲು ಯಾವುದೇ ತೊಂದರೆ ಇಲ್ಲ ಎಂದು ಅರಣ್ಯ ಸಚಿವ ಈಶ್ವರ ಖಂಡ್ರೆ ಬೆಳಗಾವಿ ಅಧಿವೇಶನದಲ್ಲಿ ತಿಳಿಸಿರುವುದು ನಿಟ್ಟುಸಿರು ಬಿಡುವಂತೆ ಮಾಡಿದೆ ಎಂದಿದ್ದಾರೆ.

# ಜನ ಸ್ನೇಹಿ ಆಡಳಿತಕ್ಕೆ ಬದ್ಧ ಶ್ರೀಧರ್ ಕಂಕಣವಾಡಿ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಬೇಲೂರು: ಸಾರ್ವಜನಿಕರ ಸಮಸ್ಯೆಗಳನ್ನು ಕುಲಂಕೂಶವಾಗಿ ಪರಿಶೀಲಿಸಿ ಪರಿಹಾರ ಕ್ರಮ ಕೈಗೊಳ್ಳಲು ಶಕ್ತಿಮೀರಿ ಶ್ರಮಿಸಲಾಗುವುದು, ಜನ ಸ್ನೇಹಿ ಆಡಳಿತ ನೀಡುವುದೇ ನಮ್ಮ ಉದ್ದೇಶ ಎಂದು ತಹಶೀಲ್ದಾರ್ ಶ್ರೀಧರ್ ಕಂಕಣವಾಡಿ ಹೇಳಿದರು.

ತಹಶಿಲ್ದಾರ್ ಕಚೇರಿಯಲ್ಲಿ ನಡೆದ ಜನಸ್ಪಂದನ ಸಭೆಯಲ್ಲಿ ವಿವಿಧ ಗ್ರಾಮಗಳಿಂದ ಆಗಮಿಸಿದ ಸಾರ್ವಜನಿಕರ ಅಹವಾಲು ಸ್ವೀಕರಿಸಿ ಮಾತನಾಢಿ, ಸಾರ್ವಜನಿಕರು ತಮ್ಮ ಸಮಸ್ಯೆಗಳನ್ನು ನೇರವಾಗಿ ಆಡಳಿತದ ಗಮನಕ್ಕೆ ತರುವ ಮಹತ್ವದ ವೇದಿಕೆ ಇದಾಗಿದೆ. ಜನರು ಕಚೇರಿಗಳ ಸುತ್ತ ಸುತ್ತಾಡುವ ಪರಿಸ್ಥಿತಿ ಬರಬಾರದು ಎಂಬ ಉದ್ದೇಶದಿಂದ ಸರ್ಕಾರ ಈ ಕಾರ್ಯಕ್ರಮ ಜಾರಿಗೆ ತಂದಿದೆ. ಪ್ರತಿಯೊಬ್ಬ ನಾಗರಿಕರ ಸಮಸ್ಯೆಯನ್ನು ಗಮನವಿಟ್ಟು ಆಲಿಸಿ ಕಾನೂನು ಹಾಗೂ ನಿಯಮಗಳ ಅಡಿಯಲ್ಲಿ ತ್ವರಿತ ಮತ್ತು ನ್ಯಾಯ ಸಮ್ಮತ ಪರಿಹಾರ ನೀಡುವುದು ನಮ್ಮ ಕರ್ತವ್ಯವಾಗಿದೆ ಎಂದರು. ಭೂ ದಾಖಲೆ, ಖಾತೆ, ಪಿಂಚಣಿ, ಪಡಿತರ ಚೀಟಿ ಸೇರಿ ವಿವಿಧ ಇಲಾಖೆಗಳ ಸಮಸ್ಯೆಗಳು ಜನಸ್ಪಂದನದಲ್ಲಿ ಬರುತ್ತಿವೆ. ಕೆಲವು ಸಮಸ್ಯೆಗಳಿಗೆ ಸ್ಥಳದಲ್ಲೇ ಪರಿಹಾರ ನೀಡಲಾಗಿದೆ. ಉಳಿದ ಅಹವಾಲುಗಳ ಬಗ್ಗೆ ಸಂಬಂಧಿಸಿದ ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಲಾಗಿದೆ. ನಿಗದಿತ ಅವಧಿಯಲ್ಲಿ ಅರ್ಜಿದಾರರಿಗೆ ನ್ಯಾಯ ದೊರಕುವಂತೆ ಕ್ರಮ ಕೈಗೊಳ್ಳಲಾಗುತ್ತದೆ ಎಂದರು. ಸಾರ್ವಜನಿಕರು ದಲಾಲರು ಅಥವಾ ಮಧ್ಯವರ್ತಿಗಳ ಮೊರೆ ಹೋಗದೆ ನೇರವಾಗಿ ಕಚೇರಿ ಸಂಪರ್ಕಿಸಬೇಕು. ಸರ್ಕಾರದ ಯೋಜನೆಗಳ ಸದುಪಯೋಗವನ್ನು ಅರ್ಹ ವ್ಯಕ್ತಿ ಪಡೆಯಬೇಕು. ಆಡಳಿತ ಪಾರದರ್ಶಕತೆ ಮತ್ತು ಜನರೊಂದಿಗೆ ನೇರ ಸಂವಾದವೇ ಉತ್ತಮ ಆಡಳಿತಕ್ಕೆ ದಾರಿ ಜನಸ್ಪಂದನ ಕಾರ್ಯಕ್ರಮವು ಜನರ ಸಮಸ್ಯೆಗಳನ್ನು ನೇರವಾಗಿ ಕೇಳಿ ಪರಿಹರಿಸುವ ಪರಿಣಾಮಕಾರಿ ವೇದಿಕೆಯಾಗಿದ್ದು, ಮುಂದೆಯೂ ನಿಯಮಿತವಾಗಿ ನಡೆಸಲಾಗುವುದು ಎಂದು ಹೇಳಿದರು. ಜನಸ್ಪಂದನ ಕಾರ್ಯಕ್ರಮದಿಂದ ಕಚೇರಿಜನರ ನಡುವಿನ ಅಂತರ ಕಡಿಮೆಯಾಗಿದ್ದು, ಆಡಳಿತ ವ್ಯವಸ್ಥೆಯ ಮೇಲಿನ ವಿಶ್ವಾಸ ಮತ್ತಷ್ಟು ಬಲವಾಗಿದೆ ಎಂದು ಸಾರ್ವಜನಿಕರು ಅಭಿಪ್ರಾಯ ವ್ಯಕ್ತಪಡಿಸಿದರು.

ಕ್ಷೇತ್ರ ಶಿಕ್ಷಣಾಧಿಕಾರಿ ಭಾಗ್ಯಮ್ಮ, ಪಿಎಸ್ಐ ಎಸ್.ಜಿ. ಪಾಟೀಲ್, ರೈತ ಮುಖಂಡ ಸ್ವಾಮಿಗೌಡ, ಬಸವರಾಜು, ಪುಟ್ಟಸ್ವಾಮಿ ಇಲಾಖೆ ಅಧಿಕಾರಿಗಳು ಇದ್ದರು.

# ಇತಿಹಾಸದಲ್ಲಿ ಈ ದಿನ

## ಡಿಸೆಂಬರ್-24

1814: ಬ್ರಿಟನ್ ಮತ್ತು ಅಮೆರಿಕ ನಡುವೆ ನಡೆದ ಯುದ್ಧಕ್ಕೆ ಅಂತ್ಯ ಸೂಚಿಸಿದ ಗ್ಯಾಂಟ್ ಒಪ್ಪಂದಕ್ಕೆ ಸಹಿ ಮಾಡಲಾಯಿತು.

1924: ಅಲ್ಬೇನಿಯಾದಲ್ಲಿ ಅಹ್ಮೆತ್ ಝೋಗು ನೇತೃತ್ವದಲ್ಲಿ ಸರ್ಕಾರ ಸ್ಥಾಪನೆ.

1955: ತೈವಾನ್‌ನಲ್ಲಿ ಸಂವಿಧಾನಾತ್ಮಕ ಸರ್ಕಾರ ಅಧಿಕೃತವಾಗಿ ಕಾರ್ಯಾರಂಭ ಮಾಡಿತು.

1966: ಭಾರತದಲ್ಲಿ ಕ್ರಿಸ್‌ಮಸ್ ಹಬ್ಬದ ಅಂಗವಾಗಿ ರಾಷ್ಟ್ರೀಯ ಮಟ್ಟದಲ್ಲಿ ವಿಶೇಷ ಕಾರ್ಯಕ್ರಮಗಳು ನಡೆದವು.

1997: ಭಾರತದಲ್ಲಿ ಕೊಂಕಣ ರೈಲು ಮಾರ್ಗದ ಸಂಪೂರ್ಣ ಸಂಚಾರಕ್ಕೆ ಚಾಲನೆ ದೊರೆಯಿತು.

### ಜನನ

1887: ರಾಧಾಕೃಷ್ಣನ್ ನಾಯರ್, ಸ್ವಾತಂತ್ರ್ಯ ಹೋರಾಟಗಾರ

1922: ಅಡ್ವಾನ್ಸ್ಡ್ ಗಣಿತಜ್ಞ ಜಾನ್ ಶಾ, ಬ್ರಿಟನ್

1956: ಅನಿಲ್ ಕಪೂರ್, ಖ್ಯಾತ ಭಾರತೀಯ ಚಲನಚಿತ್ರ ನಟ

### ಮರಣ

1524: ವಾಸ್ಕೊ ಡ ಗಾಮಾ, ಪ್ರಸಿದ್ಧ ಪೋರ್ಚುಗೀಸ್ ಸಮುದ್ರ ಅನ್ವೇಷಕ

1984: ಪೀಟರ್ ಲಾಫೋರ್ಡ್, ಹಾಲಿವುಡ್ ನಟ

2016: ರಿಚರ್ಡ್ ಅಡಮ್ಸ್, ಬ್ರಿಟಿಷ್ ಕಾದಂಬರಿಕಾರ

# ಅಕ್ರಮ ಗೋ ಮಾಂಸ ಸಾಗಾಟ: ವ್ಯಕ್ತಿ ಬಂಧನ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಸಕಲೇಶಪುರ: ಅಕ್ರಮವಾಗಿ ಗೋ ಮಾಂಸ ಸಾಗಾಟ ಮಾಡುತ್ತಿದ್ದ ಮಿನಿ ಅಶೋಕ ಲೈಲ್ಯಾಂಡ್ ಗೂಡ್ಸ್ ವಾಹನ ಚಾಲಕನನ್ನು ಬಂಧಿಸಿರುವ ಪೊಲೀಸರು ಸುಮಾರು ಒಂದು ಸಾವಿರ ಕೆ.ಜಿ. ಮಾಂಸ ವಶಪಡಿಸಿಕೊಂಡಿದ್ದಾರೆ.

ತಿಪಟೂರಿನ ಆರ್. ರಾಹಿಲ್ ಬಂಧಿತ ಆರೋಪಿ. ಡಿ. 22ರ ರಾತ್ರಿ 3ರ ಸಮಯದಲ್ಲಿ ಖಚಿತ ಮಾಹಿತಿ ಮೇರೆಗೆ ನಗರ ಠಾಣೆ ಪಿಎಸ್ಐ ಕೆ.ಎಸ್. ಕೃಷ್ಣಪ್ಪ ಹಾಗು ಸಿಬ್ಬಂದಿ ಪಟ್ಟಣದ ಕಪ್ಪಿನಕೋಡಿ ದೇವಸ್ಥಾನದ ಬಳಿ ಹಾದು ಹೋಗಿರುವ ರಾಷ್ಟ್ರೀಯ ಹೆದ್ದಾರಿ 75ರಲ್ಲಿ ಗೂಡ್ಸ್ ವಾಹನ ತಡೆದಿದ್ದಾರೆ.

ವಾಹನ ಹಿಂಭಾಗ ಪರಿಶೀಲಿಸಿದಾಗ ಪ್ಲಾಸ್ಟಿಕ್ ಚೀಲಗಳಲ್ಲಿ ಗೋ ಮಾಂಸ ತುಂಬಿರುವುದು ಕಂಡು ಬಂದಿದೆ. ಹಾಸನದ 80 ಅಡಿ ರಸ್ತೆಯಲ್ಲಿರುವ ಮುಬಾರಕ್ ಎಂಬುವವರಿಗೆ ಸೇರಿದ ಮಟನ್ ಅಂಗಡಿಯ ಶೆಡ್‌ನಲ್ಲಿ ಶೇಖರಿಸಿಟ್ಟಿದ್ದ ಗೋಮಾಂಸವನ್ನು ತುಂಬಿಕೊಂಡು ಮಂಗಳೂರು ಮೂಲದ ಮೋಹೀದ್ದೀನ್ ಎಂಬುವವರಿಗೆ ತಲುಪಿಸಲು ಹೊರಟಿದ್ದಾಗಿ ಚಾಲಕ ಒಪ್ಪಿಕೊಂಡಿದ್ದಾನೆ. ನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ಬಸ್ ಹತ್ತುವಾಗ ಚಿನ್ನದ ಸರ ಕಳವು

ಚನ್ನರಾಯಪಟ್ಟಣ: ಬಸ್ ಹತ್ತುವಾಗ ನೂಕು ನುಗ್ಗಲಿನಲ್ಲಿ ಮಹಿಳೆಯ ವ್ಯಾನಿಟಿ ಬ್ಯಾಗ್‌ನಿಂದ 33 ಗ್ರಾಂ ತೂಕದ ಚಿನ್ನದ ಸರ ಎಗರಿಸಿರುವ ಘಟನೆ ಪಟ್ಟಣದ ಬಸ್ ನಿಲ್ದಾಣದಲ್ಲಿ ನಡೆದಿದೆ. ಬೆಂಗಳೂರಿನ ಕಾವಲ್ ಬೈರಾಸಂದ್ರ ನಿವಾಸಿ ವಹಿದಾ ಬಾನು ಎಂಬುವವರಿಗೆ ಸೇರಿದ 4.21 ಲಕ್ಷ ರೂ. ಬೆಲೆಯ ಸರ ಕಳುವಾಗಿದೆ.

ಡಿ. 20 ರಂದು ಹಾಸನದ ಎಸ್‌ಆರ್‌ಎಸ್ ಜ್ಯುವೆಲ್ಲರಿಯಲ್ಲಿ ಚಿನ್ನಾಭರಣ ಖರೀದಿಸಿದ್ದ ಅವರು ಆ ದಿನ ಸಂಬಂಧಿಕರ ಮನೆಯಲ್ಲೇ ವಾಸ್ತವ್ಯ ಮಾಡಿ ಮಾರನೇ ದಿನ ಕಿಕ್ಕೇರಿಯಲ್ಲಿರುವ ತಮ್ಮ ಸಹೋದರಿ ಮನೆಗೆ ತೆರಳುತ್ತಿದ್ದರು. ಚನ್ನರಾಯಪಟ್ಟಣ ಬಸ್ ನಿಲ್ದಾಣದಲ್ಲಿ ಬಸ್ ಹತ್ತುವಾಗ ಜನಜಂಗುಳಿಯಲ್ಲಿ ವ್ಯಾನಿಟಿ ಬ್ಯಾಗ್‌ನಿಂದ ಸರ ಕದಿಯಲಾಗಿದೆ. ಪಟ್ಟಣ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ಟೈಮ್ಸ್ ಗುರುಕುಲ ಕಾಲೇಜಿನಲ್ಲಿ ಗೀತ ಯಾನ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಾಸನ: ಕನ್ನಡ ನಾಡು, ನುಡಿ ಗಟ್ಟಿಯಾಗಲು ಸುಗಮ ಸಂಗೀತದ ಕೊಡುಗೆ ಅನನ್ಯವಾಗಿದೆ ಎಂದು ಅಂತಾರಾಷ್ಟ್ರೀಯ ಸುಗಮ ಸಂಗೀತ ಗಾಯಕ ಡಾ. ಕಿಕ್ಕೇರಿ ಕೃಷ್ಣಮೂರ್ತಿ ಅಭಿಪ್ರಾಯಪಟ್ಟರು.

ಪಟ್ಟಣದ ಟೈಮ್ಸ್ ಗುರುಕುಲ ಕಾಲೇಜಿನಲ್ಲಿ ಆದರ್ಶ ಸುಗಮ ಸಂಗೀತ ಅಕಾಡೆಮಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕನ್ನಡ ಕಲಾ ಸಂಘ ಆಶ್ರಯದಲ್ಲಿ ಹಮ್ಮಿಕೊಂಡಿದ್ದ ನಾಡಗೀತೆ, ಸುಗಮ ಸಂಗೀತ ಶತಮಾನೋತ್ಸವ ಗೀತಯಾನ ಕಾರ್ಯಕ್ರಮದಲ್ಲಿ ಮಕ್ಕಳಿಗೆ ಕನ್ನಡ ಗೀತೆಗಳ ತರಬೇತಿ ನೀಡಿ ಮಾತನಾಡುತ್ತ, ಕನ್ನಡ ನಾಡಿನ ಸಿರಿವಂತಿಕೆ ಬಲುದೊಡ್ಡದಾಗಿದೆ. ಇಂತಹ ನಾಡಲ್ಲಿ ಭಾಷೆ, ಗೀತೆಗಳ ಮೂಲಕ ಅನ್ಯಭಾಷಿಕರಲ್ಲಿಯೂ ಕನ್ನಡಾಭಿಮಾನ ಮೂಡಿಸುವುದು ಎಲ್ಲರ ಕರ್ತವ್ಯ. ಕನ್ನಡದ ಕಂಪು, ನಾಡು, ನುಡಿಗೆ ಭವಿಷ್ಯದ ಮಕ್ಕಳ ಕಾಣಿಕೆ ಬಲುದೊಡ್ಡದಾಗಿದೆ. ಮಕ್ಕಳು ನಾಡಿನ ಆಸ್ತಿಯಾಗಿದ್ದು, ನಾಡಗೀತೆ, ಕನ್ನಡ ಗೀತೆಗಳು ಮಕ್ಕಳ ಮನದಲ್ಲಿ ಉಳಿದರೆ ಮಾತ್ರ ಸುಂದರ ನಮ್ಮ ಭಾಷೆ ಗಟ್ಟಿಯಾಗಲಿದೆ ಎಂದರು.



ಸಂಗೀತ ಅನ್ಯಭಾಷಿಕರನ್ನು ಸೆಳೆಯುವ ಶಕ್ತಿ ಇದೆ. ಕನ್ನಡ ಭಾಷೆಯೇ ಸುಂದರ ಸಂಗೀತವಾಗಿದೆ. ಇದರ ಮಾಧುರ್ಯ ಅರಿತು ಇಡೀ ರಾಜ್ಯದಲ್ಲಿನ ಮಕ್ಕಳಲ್ಲಿ ಕನ್ನಡಾಭಿಮಾನ ಮೂಡಲು ಉಚಿತವಾಗಿ ಈ ಸುಗಮ ಸಂಗೀತದ ಅಭಿಯಾನ ಆರಂಭಿಸಲಾಗಿದೆ. ಡಿಸೆಂಬರ್ ಮಾಹೆಯಲ್ಲಿ ರಾಷ್ಟ್ರಕವಿ ಕುವೆಂಪು, ಗಾನಗಾರುಡಿಗ ಸಿ.ಎಸ್. ಅಶ್ವತ್ಥ್ ಜನ್ಮದಿನವಿದ್ದು ಅವರ ನೆನಪಿನಲ್ಲಿ ಗೀತೆಯ ಪಯಣ ಆರಂಭಿಸಲಾಗಿದೆ. ನಾಡಿನ ಶ್ರೇಷ್ಠ ಕವಿ, ಸಾಹಿತಿ, ವಚನ, ದಾಸಸಾಹಿತ್ಯದ ಪರಿಚಯವಾದಲ್ಲಿ ಬಹುಕಾಲ ಕನ್ನಡದ ಮನಸ್ಸು ವಿಶ್ವಮಟ್ಟದಲ್ಲಿ ಕನ್ನಡದ ಕಂಪು ಸೌಂದರ್ಯ ಕಂಗೊಳಿಸಲಿದೆ ಎಂದು ನುಡಿದರು.

ಪತ್ರಕರ್ತ ಸಂಘದ ರಾಜ್ಯ ಉಪಾಧ್ಯಕ್ಷ ಮದನಗೌಡ ಮಾತನಾಡಿ, ಕನ್ನಡ ಭಾಷೆ ಮಕ್ಕಳ ನಾಲಿಗೆಯಲ್ಲಿ ನಲಿಯಲು ಸುಗಮ ಸಂಗೀತದ ಕೊಡುಗೆ ದೊಡ್ಡದಾಗಿದೆ. ಕನ್ನಡದ ತೇರು ಸುಗುಮವಾಗಿ ಎಳೆಯಲು ಗಾಯಕ ಕಿಕ್ಕೇರಿ ಹಮ್ಮಿಕೊಂಡಿರುವ ಅಭಿಯಾನ ಕನ್ನಡದ ಅಸ್ಮಿತೆ ಉಳಿಯಲು ಸಹಕಾರಿಯಾಗಿದೆ. ಬೇಸರ ಕಳೆಯಲು ಮೊಬೈಲ್ ಬಿಡಿ, ಕನ್ನಡ ಗೀತೆಯನ್ನು ಗುನುಗಿ ಸಾಕು ಮನಸ್ಸು ಕೋಮಲವಾಗಲಿದೆ ಎಂದು ಹಿತನುಡಿದರು. ಕಸಾಪ ಜಿಲ್ಲಾಧ್ಯಕ್ಷ ಎಚ್.ಎಲ್.ಮಲ್ಲೇಶ ಗೌಡ ಮಾತನಾಡಿ, ಕಲೆ ಸಾಹಿತ್ಯ ಸಂಸ್ಕೃತಿಯಲ್ಲಿ ನಮ್ಮ ದೇಶ ಶ್ರೀಮಂತವಾಗಿದ್ದು ಸುಗಮ ಸಂಗೀತದಂತಹ ಕಾರ್ಯಕ್ರಮವನ್ನು ಮಕ್ಕಳಲ್ಲಿ ಬಿತ್ತುವ ಮೂಲಕ ಸಾಹಿತ್ಯದೊಡೆಗೆ ಮಕ್ಕಳನ್ನು ಕರೆದೊಯ್ಯುವ ವಿನೂತನ ಕಾರ್ಯಕ್ರಮ ಇದಾಗಿದೆ ಎಂದು ಬಣ್ಣಿಸಿದರು.

ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಜೆ.ಆರ್. ಕೆಂಚೇಗೌಡ ಮತ್ತು ಕನ್ನಡ ಸಾಹಿತ್ಯ ಪರಿಷತ್ತಿನ ಮಾಜಿ ಗೌರವಾಧ್ಯಕ್ಷ ರವಿ ನಾಕಲಗೂಡು ಮಾತನಾಡಿ, ಟೈಮ್ಸ್ ಗುರುಕುಲ ಶಾಲೆಯಲ್ಲಿ ಮಕ್ಕಳಿಗೆ ಈ ನಾಡಿನ ಶ್ರೇಷ್ಠ ಸಾಹಿತಿ ಕವಿಗಳ ಗೀತ ಗಾಯನವನ್ನು ಅತ್ಯಂತ ಸುಮಧುರವಾಗಿ ಆಡುವ ಮೂಲಕ ಮುಂಬರುವ ಸಹಸ್ರಾರು ಸಂಖ್ಯೆಯಲ್ಲಿ ಬೆಂಗಳೂರಿನಲ್ಲಿ ಆಯೋಜಿಸುವಂತಹ ಗೀತ ಗಾಯನದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಮಕ್ಕಳು ಭಾಗವಹಿಸಬೇಕು ಮತ್ತು ಶಾಲೆ ಮತ್ತು ಜಿಲ್ಲೆಗೆ ಕೀರ್ತಿ ತರುವತ್ತಾಗಲಿ ಎಂದು ಶುಭ ಹಾರೈಸಿದರು.

ಸಂಸ್ಥೆಯ ಅಧ್ಯಕ್ಷ ಎ.ಬಿ. ಸುರೇಂದ್ರ ಕುಮಾರ್ ಮಾತನಾಡಿದರು.

ಪ್ರಾಂಶುಪಾಲೆ ಶೈಲಾ ರೈ, ಸ್ಪಂದನಾ ಫೌಂಡೇಷನ್ ಟ್ರಸ್ಟಿ ಕೆ.ವಿ. ಬಲರಾಮು ಮತ್ತಿತರರಿದ್ದರು.

# ಶ್ರವಣಬೆಳಗೊಳ ಕ್ಷೇತ್ರಾದ್ಯಂತ ನೀರಿನ ಬವಣೆ ತಪ್ಪಿಸುವ ಸಂಕಲ್ಪ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಚನ್ನರಾಯಪಟ್ಟಣ: ತಾಲ್ಲೂಕಿನ ನವಿಲೆ, ಕಲ್ಲೇಸೋಮನಹಳ್ಳಿ, ಬಾಗೂರು ಹಾಗು ಅಲಗೊಂಡನಹಳ್ಳಿ ಏತ ನೀರಾವರಿ ಯೋಜನೆ ಮೂಲಕ ನುಗ್ಗೇಹಳ್ಳಿ ಹೋಬಳಿ ವ್ಯಾಪ್ತಿಯ ಬಹುತೇಕ ಕೆರೆಗಳ ಭರ್ತಿಗೆ ಕ್ರಮ ವಹಿಸಲಾಗಿದೆ. ಕ್ಷೇತ್ರದ ಯಾವ ಗ್ರಾಮವೂ ನೀರಿನ ಸಮಸ್ಯೆಯಿಂದ ಬಳಲಬಾರದು ಎಂಬ ಉದ್ದೇಶ ನನ್ನದು ಎಂದು ಶಾಸಕ ಸಿ.ಎನ್.ಬಾಲಕೃಷ್ಣ ಹೇಳಿದರು.



ತಾಲೂಕಿನ ಗೋವಿನಕೆರೆ ಗ್ರಾಮದಲ್ಲಿ ಮಂಗಳವಾರ 1 ಕೋಟಿ ರೂ. ವೆಚ್ಚದ ಕಾಂಕ್ರಿಟ್ ರಸ್ತೆ ಕಾಮಗಾರಿಗೆ ಭೂಮಿಪೂಜೆ ನೆರವೇರಿಸಿ ಮಾತನಾಡಿ, ಬಾಗೂರು ಏತ ನೀರಾವರಿ ಯೋಜನೆ ಗೋವಿನಕೆರೆ, ಬಿ.ಹೊನ್ನೇನಹಳ್ಳಿ, ಓಬಳಾಪುರ ಹಾಗೂ ದಡ್ಡಿಹಳ್ಳಿ ಸೇರಿ ಅನೇಕ ಕೆರೆಗಳನ್ನು ಕಳೆದ 3-4 ವರ್ಷಗಳಿಂದ ತುಂಬಿಸಲಾಗುತ್ತಿದೆ. ಜೊತೆಗೆ ನವಿಲೆ ಏತ ನೀರಾವರಿ ಯೋಜನೆ ಮೂಲಕ ಅಣತಿ ಭಾಗದ ಕೆರೆ ಹಾಗು ನವಿಲೆ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಕೆರೆಗಳಿಗೆ ನೀರು ಹರಿಸಲಾಗುತ್ತಿದೆ. ಕಳೆದ ವರ್ಷ ಚಾಲನೆ ನೀಡಲಾಗಿದ್ದ ಕಲ್ಲೇಸೋಮನಹಳ್ಳಿ ಏತ ನೀರಾವರಿ ಯೋಜನೆ ಮೂಲಕ ಎಂ.ಶಿವರ ಹಾಗೂ ಕೆಂಬಾಳು ಗ್ರಾಮ ಪಂಚಾಯಿತಿ ವ್ಯಾಪ್ತಿಯ 25ಕ್ಕೂ ಹೆಚ್ಚು ಕೆರೆಗಳಿಗೆ ನೀರು ಹರಿಸಲಾಗುತ್ತಿದೆ. ಈಗಾಗಲೇ ಬಹುತೇಕ ಕೆರೆಗಳು ತುಂಬಿವೆ ಎಂದರು.

ಅಲಗೊಂಡನಹಳ್ಳಿ ಏತ ನೀರಾವರಿ ಯೋಜನೆ ಮೂಲಕ ಕುಂಬಾರಹಳ್ಳಿ, ಬ್ಯಾಡರಹಳ್ಳಿ ಭಾಗದ ಕೆರೆ ತುಂಬಿಸಲಾಗಿದೆ. ಎಲ್ಲಾ ಯೋಜನೆಗಳು ಸಂಪೂರ್ಣವಾಗಿ ಯಶಸ್ವಿಗೊಂಡಿರುವುದರಿಂದ ಹೋಬಳಿಯಲ್ಲಿ ನೂರಕ್ಕೆ ನೂರರಷ್ಟು ನೀರಾವರಿ ಯೋಜನೆ ಸಹಕಾರಗೊಂಡಿದೆಯೆಂದು ತಿಳಿಸಿದರು.

ಗೋವಿನಕೆರೆ ಗ್ರಾಮದ ಕೆರೆ ಏರಿ ಮೇಲ್ಭಾಗದ ರಸ್ತೆಯು ಕಲ್ಲೇಸೋಮನಹಳ್ಳಿ ಗ್ರಾಮಕ್ಕೆ ಸಂಪರ್ಕಿಸಲಿದ್ದು ಕೆರೆ ಏರಿ ಮೇಲ್ಭಾಗ 1 ಕಿ.ಮೀ. ಕಾಂಕ್ರಿಟ್ ರಸ್ತೆ ಅಭಿವೃದ್ಧಿಗೆ 1 ಕೋಟಿ ರೂ. ಅನುದಾನ ನೀಡಲಾಗಿದೆ. ಲಕ್ಷ್ಮೀದೇವಿ ದೇವಾಲಯದ ಹೊರಗಿನ ರಸ್ತೆ ಅಭಿವೃದ್ಧಿಗೂ ಗಮನಹರಿಸಲಾಗಿದೆ ಎಂದರು.

ಎಂ.ಶಿವರ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದಿಂದ ವ್ಯಾಪ್ತಿಯ ರೈತರಿಗೂ ಶೂನ್ಯ ಬಡ್ಡಿ ದರದಲ್ಲಿ ಸಾಲ ನೀಡಲಾಗಿದ್ದು ಹೊಸ ಷೇರುದಾರ ರೈತರಿಗೆ ಸದ್ಯದಲ್ಲೇ ಸಾಲ ಕೊಡಿಸುವುದಾಗಿ ಭರವಸೆ ನೀಡಿದರು.

ತಾಲೂಕು ಪಂಚಾಯಿತಿ ಮಾಜಿ ಅಧ್ಯಕ್ಷ ಮರಿದೇವೇಗೌಡ ಮಾತನಾಡಿ, ಕ್ಷೇತ್ರದ ಶಾಸಕ ಸಿ.ಎನ್.ಬಾಲಕೃಷ್ಣ ಅವರು ಹೋಬಳಿ ವ್ಯಾಪ್ತಿಯಲ್ಲಿ ನೀರಾವರಿ ಯೋಜನೆಗಳಿಗೆ ಆದ್ಯತೆ ನೀಡಿದ್ದಾರೆ. ಗೋವಿನಕೆರೆಯಿಂದ ಓಬಳಾಪುರ ವರೆಗಿನ ರಸ್ತೆ ಅಭಿವೃದ್ಧಿಗೆ ಅನುದಾನ ನೀಡುವಂತೆ ಒತ್ತಾಯಿಸಿದರು.

ಗ್ರಾಮ ಪಂಚಾಯಿತಿ ಅಧ್ಯಕ್ಷೆ ನಯನ ಮಧು, ಅಣ್ಣೇಗೌಡ, ಎಪಿಎಂಸಿ ಮಾಜಿ ಅಧ್ಯಕ್ಷ ವಿ.ಎನ್.ಮಂಜುನಾಥ್, ತಾ.ಪಂ. ಮಾಜಿ ಸದಸ್ಯ ಓಬಳಾಪುರ ಬಸವರಾಜ್, ಉದ್ಯಮಿ ಅಣತಿ ಯೋಗೀಶ್, ಗುತ್ತಿಗೆದಾರ ಬಾಗೂರು ಮನು ಕುಮಾರ್, ಮುಖಂಡರಾದ ಮರುವನಹಳ್ಳಿ ದೇವರಾಜ್, ವೈರಮುಡಿ ಗೌಡ, ತಮ್ಮಯ್ಯಣ್ಣ, ರಾಮು, ರಮೇಶ್, ರಾಜು, ಕಾವೇರಿ ನೀರಾವರಿ ನಿಗಮದ ಸಹಾಯಕ ಇಂಜಿನಿಯರ್‌ಗಳಾದ ಪುನೀತ್, ವಿಜಯಕುಮಾರ್ ಇತರರಿದ್ದರು.

# ಸತ್ಕಾರ್ಯಗಳು ಎಂದೆಂದಿಗೂ ಕಾಪಾಡುತ್ತವೆ: ಶಂಭುನಾಥ ಶ್ರೀ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಸಕಲೇಶಪುರ: ಕರುಳು ಹಾಗೂ ಕೊರಳಿನ ಮಾತುಗಳ ನಡುವೆ ವ್ಯತ್ಯಾಸ ತಿಳಿಯುವುದು ಅಗತ್ಯ. ಸತ್ಕಾರ್ಯಗಳು ನಮ್ಮನ್ನು ಯಾವಾಗಲೂ ಕಾಪಾಡುತ್ತವೆ ಎಂದು ಆದಿಚುಂಚನಗಿರಿ ಹಾಸನ ಶಾಖಾ ಮಠದ ಶ್ರೀ ಶಂಭುನಾಥ ಸ್ವಾಮೀಜಿ ಹೇಳಿದರು.




ಶಾಸಕ ಸಿಮೆಂಟ್ ಮಂಜು ಅವರ ಹುಟ್ಟುಹಬ್ಬದ ಹಿನ್ನೆಲೆಯಲ್ಲಿ ಪಟ್ಟಣದ ಗುರುವೇಗೌಡ ಕಲ್ಯಾಣ ಮಂಟಪದಲ್ಲಿ ಮಂಗಳವಾರ ಆಯೋಜಿಸಿದ್ದ ಆರೋಗ್ಯ ಉಚಿತ ತಪಾಸಣಾ ಶಿಬಿರ ಉದ್ಘಾಟಿಸಿ ಮಾತನಾಡಿ, ಆತ್ಮಪೂರ್ವಕ ಸೇವೆ ಬದುಕಿನುದ್ದಕ್ಕೂ ಬರಲಿದೆ. ಸ್ವಾರ್ಥದಿಂದ ಮಾಡಿದ ಸೇವೆ ಕ್ಷಣಿಕ. ಬಡವರ ಸೇವೆ ಮಾಡುವುದರಿಂದ ದೇವರ ಕೃಪೆಗೆ ಪಾತ್ರರಾಗಬಹುದು. ಹುಟ್ಟಿದ ನಾಡು, ಹೆತ್ತ ತಾಯಿ ಸ್ವರ್ಗಕ್ಕೆ ಸಮ. ಈ ಇಬ್ಬರಿಗೂ ಆತ್ಮ ಪೂರ್ವಕ ಸೇವೆ ಮಾಡಿದರೆ ಮತ್ಯಾವ ದೇವಸ್ಥಾನಕ್ಕೂ ಹೋಗುವುದು ಬೇಕಿಲ್ಲ. ಇಂತಹ ಸೇವೆಯನ್ನು ಶಾಸಕರು ಮಾಡುತ್ತಿದ್ದು ಸಕ್ರಿಯತೆ ಮುಂದಿನ ದಿನಗಳಲ್ಲಿ ಉನ್ನತ ಸ್ಥಾನ ದೊರಕಿಸಿಕೊಡುವುದರಲ್ಲಿ ಯಾವುದೆ ಅನುಮಾನವಿಲ್ಲ ಎಂದರು. ಯಸಳೂರು ತೆಂಕಲಗೂಡು ಬೃಹನ್ಮಠದ ಶ್ರೀ ಚನ್ನಸಿದ್ದೇಶ್ವರ ಸ್ವಾಮೀಜಿ ಮಾತನಾಡಿ, ಬದುಕು ಮಾದರಿಯಾಗಿರಬೇಕು. ಸಾಧಕರು ನಮಗೆ ಮಾದರಿ ಆಗಬೇಕು. ಆದರೆ ಇಂದಿನ ಯುವಜನಾಂಗಕ್ಕೆ ಯರ‍್ಯಾರೂ ಮಾದರಿಯಾಗುತ್ತಿದ್ದಾರೆ. ಅಧಿಕಾರ ಬಂದಾಗ ಅಹಂಕಾರ ಬಂದರೆ ಒಳ್ಳೆತಲ್ಲ. ದೊಡ್ಡವರಾದಂತೆ ಸರಳತೆ ಮೈಗೂಡಿಸಿಕೊಳ್ಳ ಬೇಕು ಎಂದರು.

ಕಿರಕೊಡ್ಲಿ ಮಠದ ಶ್ರೀ ಸದಾಶಿವ ಸ್ವಾಮೀಜಿ ಮಾತನಾಡಿ, ಹುಟ್ಟು ಹಬ್ಬಗಳು ಆಚರಣೆ, ಅಬ್ಬರದ ಬದಲಾಗಿ ಸಾರ್ವಜನಿಕರಿಗೆ ಸಹಾಯವಾಗುವಂತಿರಬೇಕು. ಇಂದು ನಡೆಯುತ್ತಿರುವ ಶಾಸಕರ ಹುಟ್ಟುಹಬ್ಬ ಮುಂದಿನ ದಿನಗಳಲ್ಲಿ ಎಲ್ಲರಿಗೂ ಮಾದರಿಯಾಗಲಿ ಹೆಚ್ಚೆಚ್ಚು ಒಳ್ಳೆಯ ಕಾರ್ಯಗಳು ನಡೆಯಲಿ ಎಂದರು.

ಕಲ್ಮಠದ ಮಹಾಂತ ಸ್ವಾಮೀಜಿ ಮಾತನಾಡಿ, ಇಂದು ವೈಟ್ ಕಾಲರ್ ರಾಜಕಾರಣ ಕಣ್ಮರೆಯಾಗಿದ್ದು ಜನಪ್ರತಿನಿಧಿಗಳ ನಡೆ ನುಡಿಯನ್ನು ಜನರು ಸೂಕ್ಷ್ಮವಾಗಿ ಗಮನಿಸುತ್ತಿದ್ದಾರೆ. ಉತ್ತಮ ಕಾರ್ಯಗಳನ್ನು ಮಾಡಿದವರು ಮಾತ್ರ ಹೆಚ್ಚು ದಿನ ಸಾರ್ವಜನಿಕ ಜೀವನದಲ್ಲಿ ಇರಲು ಸಾಧ್ಯ. ಆದ್ದರಿಂದ ಜನರಿಗೆ ಸಹಾಯವಾಗುವಂತಹ ಆರೋಗ್ಯ ಶಿಬಿರದಂತಹ ಕಾರ್ಯಗಳು ಜನರ ಮೆಚ್ಚುಗೆ ಗಳಿಸಲು ಸಾಧ್ಯವಾಗಿದೆ ಎಂದರು.

ಕಾರ್ಜುವಳ್ಳಿ ಹಿರೇಮಠದ ಶ್ರೀ ಸದಾಶಿವ ಸ್ವಾಮೀಜಿ ಮಾತನಾಡಿದರು. ಶಿಬಿರದಲ್ಲಿ 12ಕ್ಕೂ ಹೆಚ್ಚು ವಿಭಾಗಗಳಿಂದ 1500 ಹೆಚ್ಚು ಜನರು ಆರೋಗ್ಯ ತಪಾಸಣೆ ಮಾಡಿಸಿಕೊಂಡರು. ಸಂಕಲಾಪುರಮಠದ ಕಿರಿಯ ಶ್ರೀ ಶಾಂತವೀರ ಮಲ್ಲಿಕಾರ್ಜುನ ಶ್ರೀ, ಹಾಸನ ತಣ್ಣೀರುಹಳ್ಳ ಮಠದ ಶ್ರೀ ವಿಜಯಕುಮಾರ ಸ್ವಾಮೀಜಿ, ಬಿಜೆಪಿ ಜಿಲ್ಲಾಧ್ಯಕ್ಷ ಸಿದ್ದೇಶ್ ನಾಗೇಂದ್ರ ಇತರರಿದ್ದರು.

Printed, Published and Owned by Manjunatha B.R. and Printed at PAPPAS PRINT HOUSE, BEHIND DISTRICT STADIUM, M.G.ROAD,VIDYANAGAR, HASSAN, KARNATAKA-573201 and published at No. 150, BANAVASE, SAKALESHPURA TALLUK, HASSAN DISTRICT, KARNATAKA-573201. Editor: MANJU BANAVASE. Ph: 8762954248